# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಏಪ್ರಿಲ್ 2023 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 7
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | April 2023 | Monthly






A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಪ್ರಜಾಪ್ರಭುತ್ವದ ಹಬ್ಬವೆಂದೇ ಭಾವಿಸಿದ ಕರ್ನಾಟಕ ವಿಧಾನ ಸಭೆಯ ಚುನಾವಣೆಯ ಹೊಸ್ತಿಲಲ್ಲಿರುವ ನಾವುಗಳು ಮತದಾನದ ಮಹತ್ವವನ್ನು ತಿಳಿದು ಮತದಾನ ಮಾಡುವ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಿದೆ. ಸಮಾಜಕ್ಕೆ ದಾರಿ ತೋರುವ ಮತ್ತು ಸಮಾಜಕ್ಕೆ ಪೂರಕವಾಗುವ ಭಾವೀ ಪ್ರಜೆಗಳನ್ನು ತಯಾರು ಮಾಡುವ ಅಧ್ಯಾಪಕ ಬಳಗದ ಮೇಲೆ ಬಹುದೊಡ್ಡ ಜವಾಬ್ದಾರಿ ಇದೆ.

"ಪ್ರಜಾಪ್ರಭುತ್ವದ ಯಶಸ್ಸು ಅಕ್ಷರಸ್ಥರನ್ನು ಅವಲಂಬಿಸಿದೆ" ಎನ್ನುವ ಡಾ॥ ಬಿ. ಆರ್. ಅಂಬೇಡ್ಕರ್‌ರವರ ಮಾತು ಅಧ್ಯಾಪಕ ಸಮುದಾಯಕ್ಕೆ ಮತ್ತಷ್ಟು ಜವಾಬ್ದಾರಿ ಹೊರಿಸಿದೆ. ಮತದಾನದ ಪ್ರಮಾಣ ಹೆಚ್ಚಬೇಕು, ಅದಕ್ಕಾಗಿ ಮತದಾನದ ಮಹತ್ವವನ್ನು ಸಮಾಜದಲ್ಲಿ ಜಾಗೃತಿ ಮೂಡಿಸುವ ಮತ್ತು ಮತದಾನದ ದಿನ ಮತಗಟ್ಟೆಗಳಿಗೆ ಹೋಗಿ ದೇಶಕ್ಕೆ, ರಾಜ್ಯಕ್ಕೆ ಪೂರಕವಾಗಬಲ್ಲ, ಸಾಮಾಜಿಕ ಕಳಕಳ ಹೊಂದಿದ ವ್ಯಕ್ತಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವ ಮಹತ್ವದ ಕಾರ್ಯ ಶೈಕ್ಷಣಿಕ ಕ್ಷೇತ್ರದಲ್ಲಿರುವ ನಮ್ಮೆಲ್ಲರ ಮೇಲಿದೆ. ಅದರ ಜೊತೆಯಲ್ಲಿ ಚುನಾವಣಾ ಕರ್ತವ್ಯದಲ್ಲಿ ಭಾಗವಹಿಸುತ್ತಿರುವ ನಾವುಗಳು ಕಡ್ಡಾಯವಾಗಿ ಅಂಚೆ ಮತಪತ್ರವನ್ನು ಪಡೆದು ಮತದಾನ ಮಾಡುವುದನ್ನು ಮರೆಯಬಾರದಲ್ಲವೆ?

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಮತದಾನ ಜಾಗೃತಿ ಮಾಡುವ ಮತ್ತು ಮತದಾನ ಕಾರ್ಯದಲ್ಲಿ ಕಡ್ಡಾಯವಾಗಿ ಭಾಗವಹಿಸಲು ವಿನಂತಿಸಿಕೊಳ್ಳುತ್ತದೆ ಹಾಗೂ ಇದು ನಮ್ಮ ಆದ್ಯ ಕರ್ತವ್ಯವೂ ಹೌದು.

ಭಾರತದ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್ ಅಂಬೇಡ್ಕರ್ ಅವರ ಜಯಂತಿ, ಜಗತ್ತಿಗೆ ಸಮಾನತೆ ಸಾರಿದ ಬಸವೇಶ್ವರ ಜಯಂತಿ, ಆದಿ ಶಂಕರಾಚಾರ್ಯರ ಜಯಂತಿ, ಶ್ರೀ ರಾಮಾನುಜಾಚಾರ್ಯರ ಜಯಂತಿ, ಭಾರತೀಯ ಸಂಸ್ಕೃತಿ ನಶಿಸದಂತೆ ಹಾಗೂ ಭಾರತೀಯತೆಯನ್ನು, ಭಾರತದ ಅಂತಃಸತ್ವವಾದ ಹಿಂದುತ್ವವನ್ನು ರಕ್ಷಿಸಿದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಹಾಗೂ ಪ್ರಪಂಚಕ್ಕೆ ಅಹಿಂಸೆಯ ತತ್ವವನ್ನು ಬೀರಿದ ಮಹಾವೀರ ಜಯಂತಿ ಆಚರಿಸಿದ ನಾವು ಈ ಎಲ್ಲ ಮಹನೀಯರ ಆದರ್ಶಗಳು ನಮಗೆಲ್ಲ ಭಾರತೀಯ ಸಮಾಜವನ್ನು ಸದೃಢವಾಗಿ ಕಟ್ಟಲು ಉತ್ಸಾಹ ತುಂಬುವಂತಾಗಲಿ.

ಸಂಪಾದಕ


## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಹೆಚ್. ನಾಗಭೂಷಣರಾವ್

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು**
ಜೆ. ಎಮ್. ಜೋಶಿ

**ವ್ಯವಸ್ಥಾಪಕ ಸಂಪಾದಕರು**
ಸಂದೀಪ ಬೂದಿಹಾಳ

**ಗೌರವ ಸಲಹೆಗಾರರು**
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

**ಸಂಪಾದಕ ಮಂಡಳಿ**
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

**ವಿನ್ಯಾಸಕಾರರು**
ಪ್ರೇರಣಾ

**ಕಛೇರಿ ವ್ಯವಸ್ಥಾಪಕರು**
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಮಹರ್ಷಿ ಅರಬಿಂದೊ ಅವರ ಶಿಕ್ಷಣ ಚಿಂತನೆಗಳು — 3
- ಚುನಾವಣೆ ಬಂದಿದೆ ನಮ್ಮ ಪಾತ್ರ ತಿಳಿಯೋಣ — 5
- ಇರಾವತಿ ಕರ್ವೆ — 6
- ಮತದಾರನಿಗೊಂದು ಕಿವಿಮಾತು — 7
- ಸುತ್ತೋಲೆ — 8
- ಏಕಾತ್ಮತಾ ಸ್ತೋತ್ರ — 10
- ಯುಗಾದಿ ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ — 11
- ಚಿತ್ರ ಸುದ್ದಿ — 12

## ಮಹರ್ಷಿ ಅರಬಿಂದೊ –150 ವಿಶೇಷ ಲೇಖನ

# ಮಹರ್ಷಿ ಅರಬಿಂದೊ ಅವರ ಶಿಕ್ಷಣ ಚಿಂತನೆಗಳು

➤ ಹಿಂದಿನ ಸಂಚಿಕೆಯಿಂದ...

ಮಕ್ಕಳ ಮಾನಸಿಕ ಆರೋಗ್ಯವನ್ನು ಉತ್ತಮ ಪಡಿಸಲು ಆರಂಭದ ದಿನಗಳಿಂದಲೇ ಅವರಿಗೆ ಸೌಂದರ್ಯೋಪಾಸನಾ ಶಕ್ತಿಯ ಸಂವರ್ಧನೆ ಶಿಕ್ಷಣದಿಂದಾಗಬೇಕು. ಅವನಲ್ಲಿ ಉತ್ತಮವಾದ, ಸರಳ, ಸುಂದರವಾದ ವಸ್ತು ಹಾಗೂ ವಿಚಾರಗಳನ್ನು ಆರಿಸಿಕೊಳ್ಳುವ ಶಕ್ತಿ ಬೆಳೆಯಬೇಕು. ಸರಳ, ಸುಂದರ, ಆರೋಗ್ಯಯುತ ಹಾಗೂ ನಿಷ್ಕಲ್ಮಶ ವಿಚಾರಗಳು ಅವನಲ್ಲಿ ಮನೆ ಮಾಡಬೇಕು. ಅವನು ಸೌಂದರ್ಯದಲ್ಲಿ ದೈವತ್ವವನ್ನು ಕಾಣುವಂತಾಗಬೇಕು.

ಅರವಿಂದರ ದೃಷ್ಟಿಯಲ್ಲಿ ಮಾನಸಿಕ ಶಿಕ್ಷಣವೆಂದರೆ ಮಾಹಿತಿಗಳ ಸಂಗ್ರಹವಲ್ಲ. ಮಾಹಿತಿ ಜ್ಞಾನವಾಗಿ ಪರಿವರ್ತನೆಯಾದಾಗ ಅದು ಪಾಂಡಿತ್ಯವಾಗಿ ಪರಿವರ್ತಿತಗೊಳ್ಳುತ್ತದೆ. ಇದು ವ್ಯಕ್ತಿಯ ಶಿಕ್ಷಣಕ್ಕೆ ಕಿರೀಟ ಪ್ರಾಯವಾಗುತ್ತದೆ. ಒಂದು ವಿಷಯದ ಯಾವುದೋ ಒಂದು ಸೂಕ್ಷ್ಮ ವಿಚಾರದಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆಯುವುದು ಇಂದಿನ ಪಂಡಿತರ ಒಂದು ವೈಶಿಷ್ಟ್ಯವಾಗಿದೆ. ಅರವಿಂದರು ಈ ಮನೋಭಾವವನ್ನು Twig Science ಎಂದು ಕರೆಯುತ್ತಾರೆ. ಅವರ ದೃಷ್ಟಿಯಲ್ಲಿ ಒಂದು ವಿಷಯದ ಸಮಗ್ರ ಜ್ಞಾನವೇ ನಿಜವಾದ ಜ್ಞಾನ – a synthetic Western Scanning ಜೀವನ ದರ್ಶನ. ಅದು ಸಂಸ್ಕಾರ ಪೂರ್ಣವಾದ ಜ್ಞಾನ. “Culture is what remains when all is forgotten” – Edward Herriot. ಆದುದರಿಂದ ಶಿಕ್ಷಣವು ಒಂದು ಆತ್ಮಸಾತ್ಕರಣ ಪ್ರಕ್ರಿಯೆ.

ಈ ಪ್ರಕ್ರಿಯೆಯಲ್ಲಿ ಮೂರು ಹಂತಗಳನ್ನು ಅರವಿಂದರು ಉಲ್ಲೇಖ ಮಾಡುತ್ತಾರೆ.

1. ಜ್ಞಾನವನ್ನು ಗಳಿಸುವುದು ಹಾಗೂ ಆಗಲೇ ತನ್ನಲ್ಲಿರುವ ಜ್ಞಾನದೊಂದಿಗೆ ಹೋಲಿಸಿ ದಾಖಲಿಸಿ ಸಂಕಲಿಸುವುದು. ಅದನ್ನು ಸಂಕಲಿಸಿದ ಬಳಿಕ ಅವಶ್ಯಕತೆ ಬಂದಾಗ ಉಪಯೋಗಕ್ಕೆ ಸಾಧ್ಯವನ್ನಾಗಿ ಮಾಡಿಕೊಳ್ಳುವುದು.

2. ಸಂಶೋಧನೆಯಿಂದ ಹೊಸ, ಹೆಚ್ಚಿನ ಜ್ಞಾನವನ್ನು ಕಂಡುಕೊಳ್ಳುವುದು ಎರಡನೇಯ ಹಂತ. ಈ ಶೋಧದಲ್ಲಿ ಸಮಸ್ಯೆಗಳು ಕಂಡು ಬರಬಹುದು. ಸಮಸ್ಯೆಗಳನ್ನು ವಿಶ್ಲೇಷಿಸಿ ಅದರ ಅಂತರಾಳವನ್ನು ಶೋಧಿಸುವುದು. ಈ ಹಂತದಲ್ಲಿ ಮಗು ತನ್ನ ಕಲ್ಪನಾ ಶಕ್ತಿಯನ್ನು ಬಳಸಬೇಕಾಗಬಹುದು. ಈ ಹಂತದಲ್ಲಿ ಅದರ ಸಾಮ್ಯತೆಗಳನ್ನು ಕಂಡುಕೊಂಡು ಅದರ ರಾಚನಿಕ ಸಾಮ್ಯತೆಗಳನ್ನು ತಿಳಿದು ಅದನ್ನು ಸೂತ್ರ ರೂಪದಲ್ಲಿ ಕಲ್ಪಿಸುವ ಸಾಮರ್ಥ್ಯವನ್ನು ಪಡೆಯುವುದು ಎರಡನೆಯ ಹಂತ.

3. ಈ ರೀತಿಯಾಗಿ ಗಳಿಸಿದ ನೂತನ ಜ್ಞಾನವನ್ನು ಜೀವನ ಸನ್ನಿವೇಶಗಳಲ್ಲಿ ಉಳಿಸುವ ಸಾಮರ್ಥ್ಯವನ್ನು ಕರಗತ ಮಾಡಿಕೊಂಡು ಅದರಿಂದ ಅತ್ಯಂತ ಹೆಚ್ಚಿನ ಫಲವನ್ನು ಪಡೆಯುವುದು ಮೂರನೆಯ ಹಂತ. ಈ ಪ್ರಕ್ರಿಯೆಯಲ್ಲಿ ತನ್ನೊಂದಿಗೆ ಕೆಲಸ ಮಾಡಿದ ವ್ಯಕ್ತಿಗಳೊಂದಿಗೆ ಸಹಕಾರ ಒಮ್ಮತವನ್ನು ಪಡೆಯುವುದು ಬಹಳ ಮುಖ್ಯವಾದ ಅಂಶ ಅರವಿಂದರ ಮಾತಿನಲ್ಲಿ ಹೇಳುವುದಿದ್ದಲ್ಲಿ:

**“**The chief aim of education should be to help the growing soul to draw out that in itself which is best and make it perfect for a noble use.… It is the creative discovery of knowledge which should be the end and means of educations**”**.

ಮಕ್ಕಳಲ್ಲಿ ವಿಧ್ವಂಸಕ ಮನೋಭಾವ ಉಂಟಾಗುವುದು ಅವರಲ್ಲಿರುವ ಸೃಜನಶೀಲ ಶಕ್ತಿಯ ಬಳಕೆಗೆ ಅವಕಾಶ ಸಿಗದಿರುವಾಗ ಮಾತ್ರ. ಈ ಸ್ಥಿತಿ ಮುಂದುವರಿದಲ್ಲಿ ಮುಂದೆ ಈ ಮಕ್ಕಳು ಯುವಕ–ಯುವತಿಯರಾದಾಗ ಅವರಲ್ಲಿರುವ ಸೃಜನಶೀಲ ಶಕ್ತಿಯು ಸಮಾಜದ್ರೋಹಿ ಚಟುವಟಿಕೆಗಳಿಗೆ ಬಹಿರ್ದ್ವಾರವಾಗಿ ಪರಿಣಮಿಸುತ್ತದೆ. ಮಿದುಳಿನ ಎಡಭಾಗದಲ್ಲಿ ಜ್ಞಾನ ಸಂಗ್ರಹವಾಗುತ್ತದೆ. ಆದರೆ ಬಲ ಮಸ್ತಿಷ್ಕದಲ್ಲಿ ಈ ಸಮಗ್ರ ಸೃಜನಶೀಲತೆ, ತಪ್ಪು–ಸರಿಗಳ ಅರಿವು, ವಿಮರ್ಶಾತ್ಮಕ ಮನೋಭಾವ, ಕಲ್ಪನಾ ಶಕ್ತಿ, ಭಾವನೆಗಳು, ಸೌಂದರ್ಯೋಪಾಸನೆ ಮುಂತಾದ ಮಾನವೀಯ ಶಕ್ತಿಗಳು ನಿಯಂತ್ರಿಸಲ್ಪಡುತ್ತವೆ.

ಮಾನವನ ಮಸ್ತಿಷ್ಕದಲ್ಲಿ ಇನ್ನೊಂದು ಅದ್ಭುತವಾದ ಶಕ್ತಿ ಅಡಗಿದೆ. ಕೆಲವರಲ್ಲಿ ಅಸಾಧಾರಣ ಪ್ರತಿಭೆಯನ್ನು ಪಡೆಯುವ ಶಕ್ತಿಯಿದೆ. ಈ ಸ್ತರದ ಜ್ಞಾನಿಯನ್ನು genius ಎಂದು ಇಂಗ್ಲಿಷಿನಲ್ಲಿ ಉಲ್ಲೇಖ ಮಾಡುತ್ತಾರೆ. ಸೂಕ್ಷ್ಮ ದೃಷ್ಟಿಯನ್ನು ಈ ವ್ಯಕ್ತಿಗಳು ಅಪರೋಕ್ಷ ಜ್ಞಾನವನ್ನು ಪಡೆಯುವ ಶಕ್ತಿಯನ್ನು ಪಡೆಯಲು ಅವರಿಗೆ ಸಾಧ್ಯ. ಅವರು ಕೆಲವೊಮ್ಮೆ ಸಮಗ್ರ ದರ್ಶನ ಜ್ಞಾನವನ್ನು ವಿಶಿಷ್ಟ ಚೇತನವೊಂದರ ಮೂಲಕ ಈ ಜ್ಞಾನವನ್ನು ಪಡೆಯುತ್ತಾರೆ (Revelation) ಈ ಪ್ರಕ್ರಿಯೆ ಮನುಷ್ಯನನ್ನು ಓರ್ವ ಪ್ರವಾದಿಯನ್ನಾಗಿ ಮಾಡುತ್ತದೆ. ನಮ್ಮ ಪ್ರಾಚೀನ ಋಷಿವರೇಣ್ಯರು, ಪ್ರೊಫೆಟ್ ಮಹಮದ್, ಏಸುಕ್ರಿಸ್ತ ಹಾಗೂ 19ನೇ ಶತಮಾನದಲ್ಲಿ ಆಗಿಹೋದ ಶ್ರೀ ಅರವಿಂದರು ಹಾಗೂ ಶ್ರೀ ರಾಮಕೃಷ್ಣ ಪರಮಹಂಸರು ಈ ಪಂಗಡಕ್ಕೆ ಸೇರುತ್ತಾರೆ. ಓರ್ವ ಮಾದರಿ ಶಿಕ್ಷಕ ಈ ರೀತಿಯ ವಿಶೇಷ ಜ್ಞಾನವನ್ನು ಪಡೆಯುವ ವಿದ್ಯಾರ್ಥಿಯನ್ನು ಗುರುತಿಸಿ ಆ ಗುರಿಯತ್ತ ಸಾಗಲು ಪ್ರಯತ್ನಿಸುವಂತೆ ಪ್ರೋತ್ಸಾಹಿಸಬೇಕೆಂದು ಅರವಿಂದರು ಹೇಳುತ್ತಾರೆ.

ಇಂದು ಜ್ಞಾನವನ್ನು ಸಮಾಜ ವಿಜ್ಞಾನ, ವಿಜ್ಞಾನ ಮುಂತಾಗಿ ಅನಿರ್ಬಾಧಿತವಾಗಿ ವಿಂಗಡಿಸಿದ್ದಾರೆ. ಇಂದು ವಿಜ್ಞಾನದ ಅಧ್ಯಯನಕ್ಕೆ ಪ್ರಾಮುಖ್ಯತೆ ಕೊಡಲಾಗಿದ್ದು ಅಭಿಜಾತ ಸಾಹಿತ್ಯದ ಅಧ್ಯಯನವನ್ನು ಉದಾಸೀನ ಮನೋಭಾವದಿಂದ ಪರಿಗಣಿಸಲಾಗುತ್ತಿರುವುದು ವಿನಾಶಕಾರಿ ಎಂಬುದಾಗಿ ಅರವಿಂದರು ಅಭಿಪ್ರಾಯ ಮಾಡಬೇಕಾದಲ್ಲಿ ಸಾಹಿತ್ಯದ ಸೊಗಸು, ಬೆಡಗು, ಲಾವಣ್ಯಗಳು ಆಧಾರವಾಗಿದ್ದಲ್ಲಿ ಮಾತ್ರ ಸಾಧ್ಯ. ವಿಜ್ಞಾನ– ತಂತ್ರಜ್ಞಾನ ಭೌತಿಕ ಜೀವನವನ್ನು

**ಪುಟ 4 ಕ್ಕೆ** ➤

➢ ಪುಟ 3 ರಿಂದ.....


ಸಂಪನ್ನಗೊಳಿಸಬಹುದು. ಆದರೆ ಅದಕ್ಕೆ ಸೊಬಗು, ಸೌಂದರ್ಯಗಳು ಸಾಹಿತ್ಯದಿಂದ ಮಾತ್ರ ಬರಲು ಸಾಧ್ಯ. ಇವೆರಡರ ಸಮ್ಮಿಲನ ಜೀವನವನ್ನು ಸಂಪನ್ನಗೊಳಿಸುತ್ತದೆ.

### ಅತೀಂದ್ರಿಯ (ಪಾರಭೌತಿಕ) ಹಾಗೂ ಅಧ್ಯಾತ್ಮ ಶಿಕ್ಷಣ

ಮಾನವನಲ್ಲಿ ಅತೀಂದ್ರಿಯ ಶಕ್ತಿ ಅಡಗಿದೆ. ಅದು ವಿಕಸನವಾದಾಗ ಅವನು ಜೈವಿಕ ಸಾಮಾನ್ಯ ಸ್ತರದಿಂದ ಬಹು ಎತ್ತರಕ್ಕೆ ಸಾಗಬಲ್ಲ. ಅವನೊಬ್ಬ ಯೋಗಿಯಾಗಿ ಮಾನವ ಕುಲವನ್ನು ಉದ್ಧರಿಸಬಲ್ಲ. ಅವನಲ್ಲಿ ಒಂದು ದೈವಿಕ ಬೆಳಕು ಉಂಟಾಗಿ ಅದು ತನ್ನ ಸುತ್ತು ಮುತ್ತಣ ಪರಿಸರವನ್ನು ಪ್ರಕಾಶಿಸಬಲ್ಲದು. ಕೆಲವು ವೇಳೆ ಪುಟ್ಟ ಮಕ್ಕಳಲ್ಲೂ ಈ ದೈವಿಕ ಶಕ್ತಿ ಬೆಳಗುತ್ತದೆ. ಈ ಅನುಭವ ವ್ಯಕ್ತಿಯ ಆತ್ಮದ ಸ್ತರದಲ್ಲಿ ಉಂಟಾಗುತ್ತದೆ. ಈ ಶಕ್ತಿಯನ್ನು ಸರಿಯಾಗಿ ಬೆಳೆಸಿಕೊಂಡಾಗ ಅದು ವ್ಯಕ್ತಿಯ ಜೀವನದ ಸೂತ್ರಧಾರಿಯಾಗುತ್ತದೆ. ಅರವಿಂದರ ಅಭಿಪ್ರಾಯದಲ್ಲಿ ಶಿಕ್ಷಣ ಈ ಶಕ್ತಿಯನ್ನು ಮಕ್ಕಳಲ್ಲಿ ಬೆಳಸಬೇಕು. **"**Education should discover the soul the leader of our march set in front**"** ಆಗ ವ್ಯಕ್ತಿಯ ಶಿಕ್ಷಣದ ಜವಾಬ್ದಾರಿಯನ್ನು ಈ ಶಕ್ತಿಯೇ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಮಾನವನಲ್ಲಿ ಬೀಜರೂಪದಲ್ಲಿ ಹುದುಗಿರುವ ಈ ಅಪಾರ ಶಕ್ತಿಯ ವಿಕಸನ ಕ್ರಿಯೆ ಸರಿಯಾಗಿ ನಡೆದು ಅವನು ತನ್ನ ಪೂರ್ಣಶಕ್ತಿಯ ಪ್ರಯೋಜನವನ್ನು ಪಡೆದು ಓರ್ವ ಆದರ್ಶ ವ್ಯಕ್ತಿಯಾಗುತ್ತಾನೆ. ಮಾನವ ವಿಕಾಸದಲ್ಲಿ ಕೋಟ್ಯಾಂತರ ವರ್ಷಗಳು ಕಳೆದು ಅವನನ್ನು ಪ್ರಾಣಿಯ ಸ್ತರದಿಂದ ಮಾನವ ಸ್ತರಕ್ಕೆ ಈ ಶಕ್ತಿ ಮುಟ್ಟಿಸಿದೆ. ಅರವಿಂದರ ಚಿಂತನೆಯಲ್ಲಿ ಈ ವಿಕಾಸದ ಕೊನೆಯ ಹಂತದಲ್ಲಿ ಮಾನವ upramental, ಅತಿಮಾನವನಾಗುತ್ತಾನೆ. "Discovery of that man is inwardly a soul and two conscious power of the Divine and that evolution of this real man within is the right object of education and indeed of all human life if it would find and live according to the hidden truth and deepest law of its own being**"** ಹಂತವನ್ನು ಮುಟ್ಟುವ ಕಾರ್ಯ ವ್ಯಕ್ತಿಯ ಸ್ವಂತ ಶಕ್ತಿಯಿಂದ ಮಾತ್ರ. ಆದರೆ ಶಿಕ್ಷಣ ಆರಂಭದ ಹಂತದಿಂದಲೇ ಈ ಗುರಿಸಾಧನೆಯ ಕಾರ್ಯದಲ್ಲಿ ಸರಿಯಾದ ಮಾರ್ಗದರ್ಶನ ಮಾಡಬೇಕು. ಈ ಸಾಧನೆಗೆ ಶ್ರೇಷ್ಠಮಟ್ಟದ ದೃಢ ನಿರ್ಧಾರ, ಅವಿಚಲಿತ ಸಂಕಲ್ಪ, ಅವಿರತ ಸಾತತ್ಯ ಅತ್ಯಗತ್ಯ. ಈ ಗುರಿ ಮುಟ್ಟಿದಾಗ ಮಾನವನು ನಿಜವಾದ ಸಾಧಕನಾಗುತ್ತಾನೆ. ಅರವಿಂದರ ದೃಷ್ಟಿಯಲ್ಲಿ ಈ ಹಂತ ಮಾನವನ ವಿಕಾಸದಲ್ಲಿ ಅತ್ಯಂತ ಉನ್ನತಮಟ್ಟದಾಗಿರುತ್ತದೆ.

ಆಧ್ಯಾತ್ಮಿಕ ಶಿಕ್ಷಣವನ್ನು ಇಂದು ಮತೀಯ ಶಿಕ್ಷಣವೆಂದು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆ. ಅರವಿಂದರ ದೃಷ್ಟಿಯಲ್ಲಿ ಆಧ್ಯಾತ್ಮಿಕ ಶಿಕ್ಷಣ ಮತೀಯ ಶಿಕ್ಷಣವೂ ಅಲ್ಲ, ಯೋಗಿಕ ಶಿಕ್ಷಣವೂ ಅಲ್ಲ. ಅದು ಕೈವಲ್ಯ ಸಾಧನೆಯ ದಾರಿದೀಪ. ಈ ಭೌತಿಕ ಜೀವನದಿಂದ ಬಿಡುಗಡೆ ಹೊಂದಿ ಪರಮಾತ್ಮನೊಂದಿಗೆ ಲೀನವಾಗುವ ಪ್ರಯತ್ನದ ಮಾರ್ಗ. ಶ್ರೀಮದ್ಭಗವದ್ಗೀತೆಯಲ್ಲಿ ಗೀತಾಚಾರ್ಯ ಶ್ರೀಕೃಷ್ಣ ನಮಗೆ ತೋರಿಸಿದ–

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕರು।**
**ಮಾಮೇವೈಷ್ಯಸಿ ಸತ್ಯಂತೇ ಪ್ರತಿಜಾನೇ ಪ್ರಿಯೋಽಸಿಮೇ॥**



**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥**

(ಶ್ರೀಮದ್ಭಗವದ್ಗೀತೆ–18–65,66)

ಇಲ್ಲಿ ಸಂಪೂರ್ಣ ಶರಣಾಗತಿ ಅತ್ಯಂತ ಮುಖ್ಯವಾದ ವಿಚಾರ.

### ಅಂತರಾಷ್ಟ್ರೀಯ ಶಿಕ್ಷಣ ಕೇಂದ್ರ

ಕೃಣ್ವಂತೋ ವಿಶ್ವಮಾರ್ಯಂ' ಎಂಬ ವೇದವಾಕ್ಯದಲ್ಲಿ ದೃಢನಂಬಿಕೆಯಿದ್ದ ಅರವಿಂದರು ಅವರದೇ ಆದ ಕಲ್ಪನೆಯ ವಿಶ್ವ ಸಮಾಜವನ್ನು ಪಾಂಡಿಚೇರಿಯ ತಮ್ಮ ಆಶ್ರಮದಿಂದ ಸ್ವಲ್ಪ ದೂರದ ಅರೋವಿಲೆಯಲ್ಲಿ ಸ್ಥಾಪಿಸಲು ಮುಂದಾದರು. ಅಲ್ಲಿ ವಿಶ್ವದ ಅನೇಕ ದೇಶಗಳಿಂದ ಬಂದ ಕುಟುಂಬಗಳಿಗೆ ಆಶ್ರಯವಿತ್ತು ಅವರ ಮಕ್ಕಳಿಗಾಗಿ ಸಮರಸತೆಯಿಂದ ಕೂಡಿದ ಭಾವಿಸಮಾಜದ ರಚನೆಗಾಗಿ ಒಂದು ಶಿಶುಕೇಂದ್ರ (Kindergarten) ದಿಂದ ವಿಶ್ವವಿದ್ಯಾಲಯದ ಹಂತದವರೆಗಿನ ಶಿಕ್ಷಣ ಕ್ರಮವನ್ನು ರೂಪಿಸಿದರು. ಈ ಶಿಕ್ಷಣದ ಅವಧಿ 15 ವರ್ಷಗಳು. ಈ ಸಂಸ್ಥೆ ಅರವಿಂದಾಶ್ರಮದ ಒಂದು ವಿಸ್ತೃತ ಭಾಗ.

ಇಲ್ಲಿ ವ್ಯಕ್ತಿತ್ವದ ಬೆಳವಣಿಗೆಗಾಗಿ ಬೇಕಾಗುವ ಸಕಲ ಸೌಲಭ್ಯಗಳನ್ನು ಆಶ್ರಮ ಒದಗಿಸುತ್ತದೆ. ಈ ಕೇಂದ್ರದಲ್ಲಿ ನಿಜವಾಗಿ ವೈವಿಧ್ಯದಲ್ಲಿ ಏಕತೆಯನ್ನು ಕಾಣಬಹುದು. ಇದೇ ಇಲ್ಲಿನ ಸಾಮರಸ್ಯದ ಶಕ್ತಿ. ಇಲ್ಲಿನ ಮಕ್ಕಳೆಲ್ಲಾ ಅರವಿಂದರ ಶಿಷ್ಯರ ಕುಟುಂಬದ ಸದಸ್ಯರು. ಈ ಮಕ್ಕಳು ತಮ್ಮ ಪಾಲಕರೊಂದಿಗಿರಲೀ ಅಥವಾ ಅಲ್ಲಿನ ವಿದ್ಯಾರ್ಥಿ ನಿಲಯದಲ್ಲಿರಲೀ ಅಲ್ಲಿನ ವಾತಾವರಣದಲ್ಲಿ ಏಕತೆಯಿದೆ. ಅವರೆಲ್ಲರೂ ಅರವಿಂದರ ವಿಶ್ವ ಕುಟುಂಬದ ತತ್ವದನ್ವಯ ರೂಪಿಸಲ್ಪಟ್ಟ ಸಮಾಜದಲ್ಲಿ ಬೆಳೆದ ಮಕ್ಕಳು.

ಅವರಿಗೆ ಶೈಶವದಿಂದ ಶಿಕ್ಷಣದ ಕೊನೆಯ ಹಂತದವರೆಗೆ ಸಿಗುವ ಶಿಕ್ಷಣದಲ್ಲಿ ಏಕರೂಪತೆಯಿದೆ. ಈ ಮಕ್ಕಳು ಮೊದಲ 10–15 ವರ್ಷಗಳ ಕಾಲ ಈ ಶಿಕ್ಷಣ ಕೇಂದ್ರದಲ್ಲಿದ್ದು ಮುಂದೆ ಆಶ್ರಮವಾಸಿಗಳಾಗುತ್ತಾರೆ. ಅಲ್ಲಿ ಅವರು ಕೇಂದ್ರದಲ್ಲಿ ಕಲಿತ ತತ್ವಗಳನ್ನು ಜೀವನದಲ್ಲಿ ಬಳಸಲು ಅವಕಾಶ ಪಡೆಯುವರು. ಈ ಶಿಕ್ಷಣ ಕೇಂದ್ರ ಹಾಗೂ ಇತರ ಸಂಬಂಧಿಗಳೂ ಆಶ್ರಮವಾಸಿಗಳಾಗಿರುವುದರಿಂದ ಅವರೊಂದಿಗೆ ಮಕ್ಕಳು ಹಾಗೂ ಹಿರಿಯರು ಯಾವ ಅಂತರ, ಭೇದ– ಭಾವಗಳಿಲ್ಲದೆ ಮಿಳಿತವಾಗುತ್ತಾರೆ. ಸರ್ವರಿಗೂ ಅವರವರ ಯೋಗ್ಯತಾನುಸಾರ ಅವರ ವ್ಯಕ್ತಿತ್ವದ ಬೆಳವಣಿಗೆಗೆ ಅತ್ಯಾವಶ್ಯಕ ಸೌಲಭ್ಯಗಳನ್ನು ಅಲ್ಲಿನ ಸಮಾಜ ಒದಗಿಸುತ್ತದೆ. ಇದೊಂದು ಪರಾಸ್ಪರಾವಲಂಬಿಗಳಾದ ವ್ಯಕ್ತಿಗಳಿಂದ

ಪುಟ 9 ಕ್ಕೆ ➢

# ಚುನಾವಣೆ ಬಂದಿದೆ ನಮ್ಮ ಪಾತ್ರ ತಿಳಿಯೋಣ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಮತ್ತೊಮ್ಮೆ ನಮ್ಮನ್ನು ಆಳಬೇಕಾದವರನ್ನು ಚುನಾಯಿಸಬೇಕಾದ ಸಮಯ ಬಂದಿದೆ. ಪ್ರಜಾಪ್ರಭುತ್ವದಲ್ಲಿ ಆಳರಸರನ್ನು ಆರಿಸಬೇಕಾದ್ದು ಅನಿವಾರ್ಯ. ದುರಂತವೆಂದರೆ ಈ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಘೋಷಣೆ. ಎಲ್ಲಿಯವರೆಗೆ ಪ್ರಭುಗಳು? ನಮ್ಮ ತೋರ್ಬೆರಳಿಗೆ ಮಸಿಬಿದ್ದು, ಮತಪತ್ರದ ಮೇಲೆ ನಾವು ಮುದ್ರೆ ಒತ್ತುವವರೆಗೆ ಮಾತ್ರ. ನಂತರ ಮುಂದಿನ 5 ವರ್ಷ ನಾವು ದಾಸರೇ! ಅದಕ್ಕಾಗಿ ಮತದಾರ ಪ್ರಭುಗಳಾದ ನಾವು ಮತದಾನ ಮಾಡಬೇಕಾದ ಈ ಸಮಯದಲ್ಲಿ ಪ್ರಭುಗಳಂತೆಯೇ ವರ್ತಿಸಬೇಕು. ಸಂಸ್ಕೃತದಲ್ಲಿ 'ರಾಜ ಕಾಲಸ್ಯ ಕಾರಣಂ' ಎಂಬ ಮಾತಿದೆ. ಪ್ರಜಾಪ್ರಭುತ್ವದಲ್ಲಿ ಮುಂಬರುವ 5 ವರ್ಷಗಳ ಕಾಲಾವಧಿಯಲ್ಲಿ ನಡೆಯಲಿರುವ ಎಲ್ಲ ಆಗುಹೋಗುಗಳಿಗೆ ಇಂದಿನ ಪ್ರಭುಗಳಾದ ನಾವೇ ಕಾರಣಕರ್ತರು ಎಂಬುದೇ ಈ ಮಾತಿನ ಅರ್ಥ.

ಸಾಮಾನ್ಯವಾಗಿ ಮತದಾರರ ಸ್ವಭಾವವೇನು? ಹಲವರದ್ದು ಹಲವು ರೀತಿ. ಕೆಲವರು "ಯಾರು ಬಂದರೂ ಇಷ್ಟೇ, ಎಲ್ಲರನ್ನೂ ನೋಡಿದ್ದಾಯ್ತು" ಎಂದು ಗೊಣಗುತ್ತ ಮನೆಯಲ್ಲಿ ಕೂರುವುದು. ಇಲ್ಲ ನಾನೊಬ್ಬ ಮತದಾನ ಮಾಡದಿದ್ದರೆ ಏನಂತೆ ಎಂದು ನಿರ್ಲಿಪ್ತತೆಯಿಂದ ಇರುವುದು, ಕೆಲವರು, "ಇವರನ್ನು ಎಲೈಟ್ ಎಂದು ಕರೆಯೋಣ– ಮತದಾನ ಮಾಡುವುದು, ಅಂತಸ್ತಿಗೆ ಕಡಿಮೆ ಎಂದು ಹೆಮ್ಮೆಯಿಂದ ಎದೆಚಾಚಿ ಹಿಗ್ಗುವುದು". ಈ ಎರಡೂ ಬಗೆಯ ಜನ ಸುಶಿಕ್ಷಿತರೇ, ಇವರಲ್ಲಿ ತಥಾಕಥಿತ ಬುದ್ಧಿ ಜೀವಿಗಳೆಂದು ಕರೆಸಿಕೊಳ್ಳುವ ಉಪನ್ಯಾಸಕರು, ಪ್ರಾಧ್ಯಾಪಕರು, ಸಾಹಿತಿಗಳು, ವೈದ್ಯರು, ಹಿರಿಯ ಉದ್ಯಮಿಗಳು ಮುಂತಾದವರು ಸೇರುತ್ತಾರೆ. ಚುನಾವಣೆಯ ಪರಿಣಾಮ ಬಂದಾಗ ಮಾತ್ರ, ಮುಂದಿನ 5 ವರ್ಷಗಳವರೆಗೆ, ಮಾಧ್ಯಮಗಳಲ್ಲಿ, ಟಿ.ವಿಗಳಲ್ಲಿ, ಸಭೆ, ಸಮಾರಂಭಗಳಲ್ಲಿ ಇವರ ಟೀಕೆ ಟಿಪ್ಪಣಿಗಳ ಆಟೋಟಕ್ಕೆ ಅಂಕೆಯೇ ಇಲ್ಲ.

ನಿಜವಾಗಿ ಮತದಾನಕ್ಕೆ ಕ್ಯೂ ನಿಲ್ಲುವ ಮಂದಿ ಕಾರ್ಮಿಕರು, ಸ್ಲಂವಾಸಿಗಳು, ಅಲ್ಪ ಸ್ವಲ್ಪ ಮಧ್ಯಮ ವರ್ಗದವರು, ತಮ್ಮ ಸ್ವಜಾತಿಯ ಬಗ್ಗೆ ಹೆಮ್ಮೆ ಪಟ್ಟು ತಮ್ಮವನೇ ಚುನಾಯಿತನಾಗಲೆಂದು ಬಯಸುವವರು. ಈ ಗುಂಪಿನಲ್ಲಿ ಬಹಳಷ್ಟು ಜನರು ತಮ್ಮನ್ನು ಪ್ರಭುಗಳೆಂದು ಪರಿಗಣಿಸಿಯೇ ಇಲ್ಲ. ಇವರು ಎಂದೆಂದೂ ದಾಸರೇ. ಚುನಾವಣೆಗೆ ಮುನ್ನ ಆಮಿಷಗಳಿಗೆ, ಮದಿರೆ, ಬಾಡೂಟಕ್ಕೆ, ವಾಚು, ಉಂಗುರಗಳಿಗೆ ಕೊನೆಗೆ ಸ್ವಜಾತಿ ಪ್ರೇಮಕ್ಕೆ ಚುನಾವಣೆಯ ನಂತರವಂತು ದಾಸಾನುದಾಸರೇ!

ಪ್ರಜಾಪ್ರಭುತ್ವದ ಪ್ರಕ್ರಿಯೆಯೇ ಹೀಗಿರುವಾಗ ಉತ್ತಮವಾದುದನ್ನು ಬಯಸುವುದಾದರೂ ಹೇಗೆ? ಬಾವಿಯಲ್ಲಿರುವುದೇ ತಾನೇ ಬಿಂದಿಗೆಯಲ್ಲಿ ಬರುವುದು? ಬಿತ್ತಿದ್ದೂ ತಾನೇ ಬೆಳೆಯುವುದು? ಹೌದು, ಆಟದ ನಿಯಮಗಳಿಗನುಗುಣವಾಗೇ ಆಟ ಆಡಬೇಕು. ಆಟದ ನಿಯಮಗಳು ಬದಲಾಗುವವರೆಗೆ ಇದೇ ರೀತಿ ಮುಂದುವರೆಸಬೇಕು ಅದರ ಫಲವನ್ನು ಅನುಭವಿಸಬೇಕು.

ಇಷ್ಟೆಲ್ಲವೂ ಏತಕ್ಕೆ ಬರೆಯಬೇಕಾಗಿ ಬಂತೆಂದರೆ, ಈ ಚುನಾವಣೆಯ ಆಟದಲ್ಲಿ ಒಂದು ಪ್ರಮುಖ ಪಾತ್ರ ನಮ್ಮ ಶಿಕ್ಷಕರಿಗೂ ಇದೆ. ಶಿಕ್ಷಕರೆಂದರೆ 'ರಾಷ್ಟ್ರ ನಿರ್ಮಾಪಕರು, ಭಾವಿಜನಾಂಗವನ್ನು ರೂಪಿಸುವ ಶಿಲ್ಪಿಗಳು' ಎಂಬೆಲ್ಲಾ ಮಾತು ಸೆಪ್ಟೆಂಬರ್ 5ಕ್ಕೆ ಮಾತ್ರ ಸೀಮಿತವಾಗಬಾರದು. ಅದು ನಿಜಜೀವನದಲ್ಲೂ, ಸದಾ ಕಾಲಕ್ಕೂ ಅನ್ವಯಿಸಬೇಕಾದರೆ ಈ ಕೆಳಕಂಡ ಕೆಲವು ಅಂಶಗಳ ಬಗ್ಗೆ ನಾವು ಗಮನ ಕೊಡಬೇಕಲ್ಲವೇ?

1. ನಾವು ನಮ್ಮ ಮನೆಯವರು ತಪ್ಪದೆ ಮತದಾನ ಮಾಡಬೇಕು.
2. ಮತ ನೀಡುವಾಗ ಆಸೆ ಆಮಿಷಗಳಿಗೆ ಒಳಗಾಗದೇ ಇದ್ದುದರಲ್ಲಿ ಉತ್ತಮವಾದ ಪಕ್ಷಕ್ಕೆ ಮತ ನೀಡಬೇಕು.
3. ದೇಶದ ಹಿತವನ್ನು, ಭವಿಷ್ಯವನ್ನು ಗಮನದಲ್ಲಿರಿಸಿ ರಾಷ್ಟ್ರೀಯ ಪಕ್ಷಗಳನ್ನೇ ಆರಿಸುವುದು ಉತ್ತಮ. ಪ್ರಾದೇಶಿಕ ಪಕ್ಷಗಳೆಂದು ಅದನ್ನು ಹುಟ್ಟು ಹಾಕಿದವರು ಕೇವಲ ಸ್ವಾರ್ಥಸಾಧಕ ರಾಜಕಾರಣಿಗಳು ಎಲ್ಲದಕ್ಕೂ ಪಶ್ಚಿಮದತ್ತ ಮುಖಮಾಡುವ ನಾವು ಇಂಗ್ಲೆಂಡ್ ಅಮೇರಿಕಾದಲ್ಲಿ ಯಾವ ರೀತಿ ದ್ವಿಪಕ್ಷವು ವ್ಯವಸ್ಥೆ ರಾಷ್ಟ್ರದ ಉನ್ನತಿಗೆ ಕಾರಣವಾಗಿದೆ ಎಂಬುದನ್ನು ತಿಳಿದು ಕೊಳ್ಳಬೇಕು.
4. ನಮ್ಮ ಬಂಧುಗಳು, ಸುತ್ತಮುತ್ತಲಿನವರೆಲ್ಲರಲ್ಲೂ ಈ ಬಗ್ಗೆಯ ಜಾಗೃತಿಯನ್ನು ಮೂಡಿಸಲು ಶ್ರಮಿಸಬೇಕು.
5. ನಮ್ಮನ್ನು ಚುನಾವಣಾಧಿಕಾರಿಗಳೆಂದು ಆಯ್ಕೆ ಮಾಡಿದ್ದರೆ, ಆ ಕೆಲಸವನ್ನು ನಿಷ್ಠೆ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಅನೇಕ ಬಾರಿ ಚುನಾವಣಾ ಅಧಿಕಾರಿಗಳಿಂದಲೇ ವ್ಯವಸ್ಥೆ ಭ್ರಷ್ಟವಾದುದನ್ನು ಓದಿದ್ದೇವೆ, ಕೇಳಿದ್ದೇವೆ. ಆದುದರಿಂದ ಮತಕೇಂದ್ರದ ಪಾವಿತ್ರ್ಯವನ್ನು ಕಾಪಾಡುವುದು ನಮ್ಮ ಹೊಣೆ ಅಲ್ಲಿ ಯಾವುದೇ ಆಸೆ ಆಮಿಷೆಗಳಿಗೆ ಒತ್ತಡಗಳಿಗೆ ನಾವು ಬಲಿಯಾಗದಿರುವ ಸಂಕಲ್ಪ ಮಾಡಬೇಕು.
6. 'ವೋಟ್ ವಿ ಮಷ್ಟ್' ಎಂಬ ಮಾತನ್ನು ಎಲ್ಲೆಡೆ ಪ್ರಚಾರ ಮಾಡಬೇಕು. ಇದು ನಮ್ಮ ಕರ್ತವ್ಯವೂ ಹೌದು ಬಾಧ್ಯತೆಯೂ ಹೌದು.
7. ನಾವು ಶಿಕ್ಷಕರು ಸಮಾಜವನ್ನು ಒಗ್ಗೂಡಿಸುವ ಬಾದ್ಯತೆ ಇರುವವರು. ರಾಜಕಾರಣಿಗಳಾದರೋ ಸ್ವಹಿತಕ್ಕಾಗಿ ಸಮಾಜವನ್ನು ಒಡೆಯುವುದನ್ನು ಗುರಿಯಾಗಿ ಹೊಂದಿರುವವರು. ಅವರ ಪ್ರಯತ್ನ ನಿಷ್ಫಲಗೊಳಿಸುವುದೆ ನಮ್ಮ ಜೀವನ ಧ್ಯೇಯವಾಗಬೇಕು. ನಾವೆಲ್ಲ ಜಾತಿಕುಲಭಾಷೆ ಮುಂತಾದ ವಿಘಟನೆಯ ವಿಷಯಗಳಿಂದ ದೂರವಿದ್ದು, ಜೋಡಣೆಯ ಮಾಧ್ಯಮವಾಗಬೇಕು.
8. ಇಂದು ದೇಶ ಇರುವ ಪರಿಸ್ಥಿತಿಯನ್ನು ಗಮನಿಸಿ. ದೇಶವು ಸುತ್ತಲೂ ಶತ್ರುಗಳಿಂದ ಸುತ್ತವರೆಯಲ್ಪಟ್ಟಿದೆ. ದೇಶದೊಳಗಡೆ ಕುಟ್ಟೆ ಹುಳುವಿನಂತೆ ಬಾಧಿಸುತ್ತಿರುವ ನಕ್ಸಲರು, ಭಯೋತ್ಪಾದಕರು, ಸ್ವಾರ್ಥಿ ಸಮಯ ಸಾಧಕರಿಂದ ದೇಶವಿಂದು ಅಪಾಯ ಸ್ಥಿತಿಯಲ್ಲಿ ಇದೆ. ಇದನ್ನು ಮನಗಂಡು ಈ ಸಂಕಟವನ್ನು ನಿವಾರಿಸಿ, ಸಶಕ್ತ ಭಾರತವನ್ನು ನಿರ್ಮಿಸಲು ಸಂಕಲ್ಪ ತೊಟ್ಟವರನ್ನೇ ಆರಿಸಿ ಕಳಿಸಿದರೆ, ನಾವು ಇತ್ತ ಮತಕ್ಕೊಂದು ಬೆಲೆ ಬಂದೀತು. ನಮ್ಮ ಮತವೂ ಸಾರ್ಥಕವಾದೀತು.

ಅಂಥ ಸಾರ್ಥಕ್ಯದ ಭಾವ ನಮ್ಮಲ್ಲಿ ಮೂಡಬೇಕಾಗಿದರೆ ಹತ್ತುಬಾರಿ ಯೋಚಿಸಿ, ಚಿಂತಿಸಿ ಯೋಗ್ಯ ಪಕ್ಷಕ್ಕೆ ಮತ ನೀಡೋಣ. ಅದು ನಮ್ಮ ಧರ್ಮವೂ ಹೌದು ಮತ್ತು ಕರ್ತವ್ಯವೂ ಹೌದು. ●

**ಬಹುರತ್ನಾ ವಸುಂಧರಾ**

# ಇರಾವತಿ ಕರ್ವೆ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಅಂದು ಭಾರತದಲ್ಲಿ ಮಾನವ ವಿಜ್ಞಾನವನ್ನು ಹೆಚ್ಚಾಗಿ ಪುರುಷರೇ ಅಧ್ಯಯನ ಮಾಡುತ್ತಿದ್ದ ಕಾಲ. ಏಕೆಂದರೆ ಅದಕ್ಕೆ ಕ್ಷೇತ್ರಾಧ್ಯಯನ ಬಹಳ ಅಗತ್ಯವಿತ್ತು. ಆದರೆ ಆ ವಿಷಯದಲ್ಲಿ ವಿಶೇಷ ಆಸಕ್ತಿ ಹೊಂದಿ, ಉನ್ನತ ಶಿಕ್ಷಣ ಪಡೆದ ಪ್ರಥಮ ಮಹಿಳೆ ಇರಾವತಿ ಕರ್ವೆ. ಬಹಳಷ್ಟು ಕಡೆಗಳಿಗೆ ಸ್ವತಃ ಹೋಗಿ ಪ್ರಾಯೋಗಿಕವಾಗಿ ಅಧ್ಯಯನ ಮಾಡಿಯೇ ಮಾಹಿತಿ ಸಂಗ್ರಹಿಸಬೇಕಾದ ವಸ್ತು ಅದಾಗಿತ್ತು. ಅದೆಲ್ಲವನ್ನೂ ಅತ್ಯಾಸಕ್ತಿಯಿಂದ ಅವರು ಮಾಡಿದ್ದರು. ತಮ್ಮ ಊರಾದ ನಾಸಿಕದಲ್ಲಿ ಮನೆಮನೆಗೂ ಹೋಗಿ ಜನರ ತಲೆಯ ಅಳತೆ ತೆಗೆದುಕೊಂಡು, ಮಾನವ ವಿಜ್ಞಾನದ ಆಧಾರದೊಂದಿಗೆ ಅಭ್ಯಾಸ ಮಾಡುತ್ತ ಭೂಸಂಶೋಧನೆಗಳು ನಡೆಯುತ್ತಿದ್ದ ಪ್ರದೇಶಗಳಿಗೆ ಹೋಗಿ, ವಿವರಗಳನ್ನು ಕಂಡುಬಂದರು. ಅರಣ್ಯಪ್ರದೇಶಗಳಿಗೆ ಹೋಗಿ ಅಲ್ಲಿನ ಭಿಲ್ಲರ ವಾಸಸ್ಥಾನಗಳಿಗೆ ಭೇಟಿ ನೀಡಿ, ಅವರ ಜೀವನಕ್ರಮವನ್ನು ಕುರಿತು ಅಭ್ಯಾಸ ಮಾಡಿದರು. ಪರಿಶಿಷ್ಟ ಜಾತಿ-ವರ್ಗಗಳ, ದಲಿತ ಜನರ ಕುಂದುಕೊರತೆಗಳನ್ನು ಅರಿತು ಅವುಗಳ ಪರಿಹಾರಕ್ಕಾಗಿ ಪ್ರಯತ್ನಿಸಿದರು. ಅವರೆಲ್ಲರ ಜೀವನರೀತಿಯಲ್ಲಿನ ವೈವಿಧ್ಯದ ಕುರಿತು ಅಧ್ಯಯನ ಮಾಡಿದರು. ಅವರಲ್ಲಿನ ಸಂಪ್ರದಾಯಗಳ ಸಮಾಜವ್ಯವಸ್ಥೆಗಳನ್ನು ತಿಳಿಯುವ ಕಾರ್ಯದಲ್ಲಿ ತೊಡಗಿಸಿಕೊಂಡರು. ಹೀಗೆ ಮಾನವವಿಜ್ಞಾನದ ಎಲ್ಲ ದಿಕ್ಕುಗಳಲ್ಲಿಯೂ ಆಳವಾದ ಅಧ್ಯಯನವನ್ನು ಕೈಕೊಂಡ ಇರಾವತಿ ಕರ್ವೆ ತಮ್ಮ ತಾಯ್ನಾಡಾದ ಮಹಾರಾಷ್ಟ್ರದಲ್ಲಿ ಮರಾಠೀ ಭಾಷೆಯ ಸಾಹಿತ್ಯಕ್ಷೇತ್ರದಲ್ಲಿಯೂ ಒಳ್ಳೆಯ ಹೆಸರು ಗಳಿಸಿದರು.

1905ರ ಡಿಸೆಂಬರ್ 15ರಂದು ಜನಿಸಿದ ಇರಾವತಿಯವರ ತಂದೆ ಜಿ.ಹೆಚ್. ಕರಮರಕರ್. ಸುಸಂಸ್ಕೃತ ಮನೆತನದಲ್ಲಿ ಹುಟ್ಟಿದ ಇರಾವತಿ ತತ್ವಶಾಸ್ತ್ರದಲ್ಲಿ ಪದವಿ ಪಡೆದು, ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.ನಂತರದಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಉನ್ನತಶಿಕ್ಷಣವನ್ನು ಮುಂದುವರೆಸಿ, ಮಾನವ ವಿಜ್ಞಾನದಲ್ಲಿ ಪಿಎಚ್.ಡಿ. ಪದವಿಯನ್ನು ಗಳಿಸಿದರು. ಆ ಸಮಯದಲ್ಲಿಯೇ ಅಲ್ಲಿಗೆ ಭಾರತದಿಂದ ಉನ್ನತ ಶಿಕ್ಷಣ ಪಡೆಯಲು ಬಂದಿದ್ದ ಡಿ.ಡಿ.ಕರ್ವೆಯವರ ಪರಿಚಯವಾಗಿ ನಂತರದಲ್ಲಿ ಅವರನ್ನು ವಿವಾಹವಾಗಿ ಇರಾವತಿ ಕರ್ವೆ ಎಂದು ಗುರುತಿಸಲ್ಪಟ್ಟರು.

ಬರ್ಲಿನ್‌ನಿಂದ ಹಿಂತಿರುಗಿದ ಮೇಲೆ ಇರಾವತಿ ಕರ್ವೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸಮಾಜ ವಿಜ್ಞಾನ ಮತ್ತು ಮಾನವ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದರು. ಮುಂದೆ ಭಾರತೀಯ ವಿಜ್ಞಾನ ಕಾಂಗ್ರೆಸ್ ನ ಮಾನವ ವಿಜ್ಞಾನ ವಿಭಾಗದ ಅಧ್ಯಕ್ಷರಾಗಿ ಚುನಾಯಿತರಾಗಿ 1955ರಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿ, ಆಫ್ರಿಕಾದಲ್ಲಿ ಜರುಗಿದ "ಚರಿತ್ರಪೂರ್ವ ಅವಧಿ ಅಧಿವೇಶನ"ದಲ್ಲಿ ಭಾಗವಹಿಸಿದರು. ಮುಂದೆ ಅದೇ ವರ್ಷ ಲಂಡನ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರೆಂದು ನೇಮಕಗೊಂಡು ಅಲ್ಲಿ ಒಂದು ವರ್ಷ ಇದ್ದರು.

ಇರಾವತಿ ಕರ್ವೆ ಸಂಪ್ರದಾಯ ಶರಣೆಯಾಗಿರಲಿಲ್ಲ. ವೈಚಾರಿಕ ಮನೋಭಾವದ, ಪ್ರಗತಿಶೀಲ ಸ್ವಭಾವದವರಾಗಿದ್ದ ಅವರು ತಮ್ಮ ಅಭಿಪ್ರಾಯಗಳನ್ನು ಯಾವ ವಿಷಯದಲ್ಲಿಯೇ ಆದರೂ ದಿಟ್ಟತನದಿಂದ ವ್ಯಕ್ತಪಡಿಸಲು ಹಿಂಜರಿಯುತ್ತಿರಲಿಲ್ಲ. ಸಂಶೋಧನೆ ಎಂಬುದು ಅವರಿಗೆ ಬಹು ಪ್ರಿಯವಾದ ಕಾರ್ಯವಾಗಿತ್ತು. ಮಾನವ ವಿಜ್ಞಾನದ ರಕ್ತಸಂಬಂಧ, ಜಾತಿ ವ್ಯವಸ್ಥೆ, ಸಂಸ್ಕೃತಿ, ಸಂಪ್ರದಾಯಗಳಲ್ಲಿನ ವೈವಿಧ್ಯ, ಜೀವನಶೈಲಿ, ಎಲ್ಲದರ ಕುರಿತು ಆಳವಾದ ಅಧ್ಯಯನ ನಡೆಸಿ, ಹಿಂದುಳಿದ ಜನರ ಜೀವನಮಟ್ಟವನ್ನು ಸುಧಾರಿಸಲು ಸರ್ಕಾರಕ್ಕೆ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದ್ದರು.

ಇರಾವತಿ ಕರ್ವೆ ಸಾಹಿತ್ಯಕ್ಷೇತ್ರದಲ್ಲಿ ಸಹ ತಮ್ಮ ಆಸಕ್ತಿಯನ್ನು ಹೊಂದಿದ್ದು, ಖ್ಯಾತ ಲೇಖಕಿ ಎನಿಸಿಕೊಂಡಿದ್ದರು. ಅವರು ಮರಾಠಿ ಭಾಷೆಯಲ್ಲಿ ಮಹಾಭಾರತವನ್ನು ಕುರಿತು ಬರೆದ ವಿಮರ್ಶಾಗ್ರಂಥ "ಯುಗಾಂತ" ಬಹಳ ವಾದವಿವಾದಗಳಿಗೆ ಇವರು ಹೆದರದೆ ತಮ್ಮ ನಿಲುವನ್ನೇ ಸಮರ್ಥಿಸಿಕೊಂಡಿದ್ದರು. "ಪರಿಪುತ್ರಿ" ಮರಾಠಿ ಭಾಷೆಯಲ್ಲಿ ಅವರು ಬರೆದ ಪ್ರಬಂಧಗಳ ಸಂಕಲನ. ಇಂಗ್ಲಿಷಿನಲ್ಲಿ "ಹಿಂದೂ ಸೊಸೈಟಿ ಆನ್ ಇಂಟರ್ ಪ್ರಿಟೇಷನ್", "ಕಿನ್ ಶಿಪ್ ಆರ್ಗನೈಸೇಷನ್ ಇನ್ ಇಂಡಿಯಾ" ಮತ್ತು "ಮಹಾರಾಷ್ಟ್ರ-ಲ್ಯಾಂಡ್ ಆಂಡ್ ಪೀಪಲ್" ಅವರು ಬರೆದ ಪುಸ್ತಕಗಳು. ಇವು ಭಾರತದಲ್ಲಿ ಮಾತ್ರವಲ್ಲದೆ ಪಾಶ್ಚಾತ್ಯ ದೇಶಗಳಲ್ಲಿಯೂ ಖ್ಯಾತವಾಗಿವೆ. "ಯುಗಾಂತ" ಗ್ರಂಥಕ್ಕೆ 1968ರ ಕನ್ನಡ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಸಂದಿತು. ಇದು ಕನ್ನಡಕ್ಕೆ ಸಹ ಅನುವಾದಗೊಂಡಿದೆ. ಮಹಾಭಾರತದ ಹಲವು ಪಾತ್ರಗಳನ್ನು ಕುರಿತು ಇದರಲ್ಲಿ ತಮ್ಮದೇ ಆದ ರೀತಿಯಲ್ಲಿ ವಿಮರ್ಶೆ ಮಾಡಿದ್ದಾರೆ.

ಕಾಲೇಜಿನಲ್ಲಿ ಉತ್ತಮ ಬೋಧಕರಾಗಿ, ಸಂಶೋಧಕರಾಗಿ, ಗ್ರಂಥಕರ್ತರಾಗಿ, ಒಳ್ಳೆಯ ವಾಗ್ಮಿಯಾಗಿ ಹಲವು ಪ್ರಕಾರಗಳಲ್ಲಿ ಹೆಸರು ಮಾಡಿದ್ದರು. ಇವರ ಮಹಾ ಪ್ರಬಂಧದ ವಿಷಯ "ಚಿತ್ಪಾವನ್ ಬ್ರಾಹ್ಮಣಾಸ್ ಆನ್ ಎಥಿನಿಕ್ ಸ್ಟಡಿ" ಅದು ಅವರದೇ ಜನಾಂಗಕ್ಕೆ ಸಂಬಂಧಿಸಿದ ಅಧ್ಯಯನವಾಗಿದೆ. ಇರಾವತಿ ಕರ್ವೆ ವಿವಾಹವಾದ ಡಿ.ಡಿ. ಕರ್ವೆಯವರ ತಂದೆ ಧೊಂಡೊ ಕೇಶವ ಕರ್ವೆ ಒಬ್ಬ ಸಮಾಜ ಸುಧಾರಕರೂ, ವಿಧವಾ ವಿವಾಹ ಮತ್ತು ಮಹಿಳಾ ಶಿಕ್ಷಣದ ಕುರಿತು ಸಕಾರಾತ್ಮಕ ಅಭಿಪ್ರಾಯಗಳನ್ನು ಹೊಂದಿದ್ದವರೂ ಅಗಿದ್ದರು.

ಮಹಿಳಾ ಸ್ವಾತಂತ್ರ್ಯದ ಬಗ್ಗೆ ಇರಾವತಿಯವರ ವಿಚಾರಗಳೂ ತುಂಬ ಆಧುನಿಕವಾಗಿದ್ದುವು. ಮಹಿಳೆಯ ಸ್ವಾತಂತ್ರ್ಯದ ಕುರಿತು ಮಾತನಾಡುತ್ತ ಅವರು ಹೀಗೆ ಹೇಳುತ್ತಿದ್ದರು, "ಮಹಿಳೆಯರೆ, ನಿಮ್ಮ ಹಕ್ಕುಗಳಿಗಾಗಿ ಪುರುಷರೊಡನೆ ಹೋರಾಡುವಾಗ ಸಮಾನ ಹಕ್ಕನ್ನು ಮಾತ್ರ ಏಕೆ ಕೇಳುತ್ತೀರಿ? ಅವರಿಗಿಂತ ಹೆಚ್ಚಿನ ಹಕ್ಕನ್ನು ಏಕೆ ಕೇಳುವುದಿಲ್ಲ?" ಕ್ರಾಂತಿಕಾರಕವೂ, ಪ್ರಗತಿಶೀಲವೂ ಆದ ವಿಚಾರಗಳನ್ನು ಹೊಂದಿದ್ದ ಇರಾವತಿ ಕರ್ವೆ ತಮ್ಮ ಸಂಶೋಧನಾತ್ಮಕ ಸ್ವಭಾವದಿಂದ ಹಲವರಿಗೆ ಪ್ರೇರಕರಾಗಿದ್ದರು. ●

# ಮತದಾರನಿಗೊಂದು ಕಿವಿಮಾತು

ಡಾ॥ ಡಿ.ವಿ ಗುಂಡಪ್ಪನವರು ನಮ್ಮ ನಾಡುಕಂಡ ಮುತ್ಸದ್ದಿಗಳಲ್ಲಿ ಓರ್ವರು. ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ ಸೇವೆಗೈದವರು. ಅವರು ರಾಜ್ಯಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ ಅದರ ಬಗೆಗಿನ ಹಲವು ಲೇಖನಗಳನ್ನು ಬರೆದು ಜನಜಾಗೃತಿಯನ್ನುಂಟುಮಾಡಿದರು. ಅಂಥ ಒಂದು ಲೇಖನದ ಆರಿಸಿದ ಭಾಗ ಇಲ್ಲಿದೆ.

**ಉಮೇದುವಾರನ ಅರ್ಹತೆ: ಉಮೇದುವಾರನು ಎಂಥವನಾಗಿರಬೇಕಾದ ಮೂರು ಗುಣಗಳು**

1. ದೇಶಋಣ ಬುದ್ಧಿ ; 2. ನ್ಯಾಯೋತ್ಸಾಹ ; 3. ಸಾರ್ವಜನಿಕ ಸ್ವಪ್ರತಿ ಫಲ ಚಿಂತನೆಗಿಂತ ಮೇಲ್ಪಟ್ಟ ಮತ್ತು ಜೀವಸಂಸ್ಕಾರವಾದ ಧರ್ಮಕ್ರಿಯೆಯೆಂಬ ಪಾರಮಾರ್ಥಿಕತೆ. ಯಾವ ರಾಷ್ಟ್ರಕನು ಈ ಗುಣಗಳನ್ನು ಅಭ್ಯಸಿಸಿರುತ್ತಾನೋ ಅವನು ಇತರ ಸಂದರ್ಭ ಸನ್ನಿವೇಶಗಳು ಸರಿಯಾಗಿದ್ದಲ್ಲಿ. ವರಣಾಭ್ಯರ್ಥಿಯಾಗಿ ಮುಂದೆ ಬರಬೇಕಾದವನು, ಅವನಿಗಿರಬೇಕಾದ ಸಂದರ್ಭಾನುಕೂಲತೆಗಳಲ್ಲಿ ಮುಖ್ಯವಾದವು 1) ಸ್ವತಂತ್ರ ಜೀವನಕ್ಕೆ ತಕ್ಕ ಮಟ್ಟಿನ ಸ್ವಂತ ಆಸ್ತಿ ಅಥವಾ ಆದಾಯ; 2) ವಿದ್ಯೆ, ಲೋಕಾನುಭವಗಳು; 3) ಜನಸಾಮಾನ್ಯದ ಸ್ನೇಹ ಪರಿಚಯ.

ನಮ್ಮ ದೇಶದ ಪ್ರಕೃತ ಸಂದರ್ಭದಲ್ಲಿ ಒಂದು ವಿಶೇಷದ ಎಚ್ಚರಿಕೆಯ ಮಾತನ್ನು ಹೇಳಬೇಕಾಗಿದೆ; ಒಬ್ಬಾನೊಬ್ಬ ಸಾರ್ವಜನಿಕನು ನಾವು ಸೂಚಿಸಿರುವ ಎಲ್ಲ ತರದ ಅರ್ಹತೆಗಳನ್ನೂ ಪಡೆದವನಾಗಿದ್ದರೂ, ಅವನು ಉಮೇದುವಾರನಾಗಿ ಮುಂದೆ ಬಂದ ಕಾರಣದಿಂದ ಸಮಾಜದಲ್ಲಿ ಜಾತಿಮತಗಳ ದೆಸೆಯ ಪ್ರತಿಸ್ಪರ್ಧೆ ಹುಟ್ಟುವ ಸಂಭವವಿದ್ದಲ್ಲಿ ಅವನು ತನ್ನ ಉಮೇದುವಾರಿಕೆಯನ್ನು ತೊರೆಯುವುದು ಲೇಸು. ಅವನಿಂದ ಶಾಸನಸಂಸ್ಥೆಯ ಮೂಲಕ ಆಗಬಹುದಾದ ದೇಶಸೇವೆ ಎಷ್ಟರದೇ ಆದರೂ ಅವನ ಅಭ್ಯರ್ಥಿತನವು ಕೆಣಕುವ ಜಾತಿಮತ ಮಾತ್ಸರ್ಯಗಳು ಆ ಸೇವೆಯನ್ನು ನುಂಗಿ ಹಾಕುವರಷ್ಟರವು. ಈಗ ನಮ್ಮ ದೇಶಕ್ಕೆ ಬೇಕಾಗಿರುವ ಎಲ್ಲ ಶುಭಗಳಲ್ಲಿಯೂ ಮೇಲ್ತೆರದ್ದು ಸಮಾಜದ ಸಮಾಧಾನ ಐಕಮತ್ಯಗಳು. ಸಮಾಜ ಸಂಕ್ಷೋಭೆಯನ್ನಾದರೂ ಮಾಡಿ ದೇಶಸೇವೆಗೆ ಮುಂದೆ ಬರುತ್ತೇನೆನ್ನುವವನಿಂದ ಪರಿಶುದ್ಧವಾದ ಸೇವೆ ನಡೆದೀತೆಂದು ನಿರೀಕ್ಷಿಸುವುದು ಕಷ್ಟ.

## ಯೋಗ್ಯತೆ ನೋಡಬೇಕು

**1. ಜನಾಭಿಮಾನ:** ನಿಮ್ಮ ವರಣ ಸಹಾಯವನ್ನು ಅಪೇಕ್ಷಿಸುವವರ ಯೋಗ್ಯತೆಯನ್ನು ನಿಶ್ಚಯಿಸುವುದು ಹೇಗೆ? ಮೊದಲು ಆತನು ಪ್ರಜಾಭಿಮಾನವುಳ್ಳವನೆ? ಜನರ ಕಷ್ಟನಿವಾರಣೆಗಾಗಿ ಆತನು ಇದುವರೆಗೂ ಎಷ್ಟು ಮಾತ್ರವಾದರೂ ಶ್ರದ್ಧೆ ತೋರಿಸಿದ್ದಾನೆಯೇ? ಸಮ್ಮತಿಗಳನ್ನು ಬೇಡಿಕೊಳ್ಳುವ ಕಾಲದಲ್ಲಿ ಮಾತ್ರವೇ ಅಲ್ಲದೆ ಇತರ ಕಾಲಗಳಲ್ಲಿಯಲ್ಲಿಯಾದರೂ ಕೆಲಸ ಮಾಡಿದ್ದಾನೆಯೆ? ಎಂದು ಮೊದಲಾಗಿ ವಿಚಾರಿಸಿ ನೋಡಬೇಕು.

**2. ನಡೆನುಡಿಯಲ್ಲಿ ನಿಯಮ:** ಆಮೇಲೆ, ಆತನು ವಿವೇಕಶಾಲಿಯೆ, ಮರ್ಯಾದೆಯುಳ್ಳವನೆ, ನಡೆನುಡಿಗಳಲ್ಲಿ ನಿಷ್ಕರ್ಷೆಯುಳ್ಳವನೆ ಎಂಬುದನ್ನು ನೋಡಬೇಕು. ತನ್ನ ಕಸಬಿನಲ್ಲಿಯಾಗಲಿ, ವ್ಯಾಪಾರದಲ್ಲಿಯಾಗಲಿ, ಪ್ರಮಾಣಿಕತೆಯಿಂದಲೂ, ದೂರದೃಷ್ಟಿಯಿಂದಲೂ, ವಿಚಕ್ಷಣೆಯಿಂದಲೂ, ನಡೆದು ಗೌರವ ಸಂಪಾದಿಸಿಕೊಂಡಿರುವ ಮನುಷ್ಯನು ಸಭೆಗಳಲ್ಲಿಯೂ ಅದೇ ಗುಣಗಳನ್ನು ತೋರಿಸಿ ಪ್ರಜಾಕಾರ್ಯಗಳನ್ನು ಸಾಧಿಸಲು ಶಕ್ತನಾಗುವನೆಂದು ನಾವು ನಂಬಬಹುದು.

**3. ರಾಜ್ಯಕಾರ್ಯ ಜ್ಞಾನ:** ಬಳಿಕ, ಆತನು ರಾಜಕೀಯ ಪರಿಜ್ಞಾನವುಳ್ಳವನೆ ಎಂಬುದನ್ನೂ ವಿಚಾರಿಸಬೇಕು. ಸಭೆ ಸಮಿತಿಗಳಲ್ಲಿ ಕೆಲಸ ಮಾಡುವುದಕ್ಕೆ ಬರಿಯ ಉತ್ಸಾಹ ಸಾಲದು. ಅದರ ಜೊತೆಗೆ ಅನೇಕ ದೇಶ ವಿಷಯಗಳ ತಿಳಿವಳಿಕೆ, ಲೋಕಾನುಭವ, ಗ್ರಂಥಪರಿಚಯ, ಭಾಷಣಶಕ್ತಿ, ಕಕ್ಷಿಪ್ರತೀಕ್ಷಿಗಳ ಹೇಳಿಕೆಗಳನ್ನು ತೂಕಮಾಡಿ ನೋಡಿ ಅವುಗಳಲ್ಲಿರುವ ಗುಣಾಂಶಗಳನ್ನು ಕಂಡುಹಿಡಿದುಕೊಳ್ಳುವಷ್ಟು ಸಾವಧಾನತೆ ಮತ್ತು ಬುದ್ಧಿ ಕುಶಲತೆ– ಇವೆಲ್ಲವೂ ನಮ್ಮ ಪ್ರತಿನಿಧಿಗಳಿಗೆ ಅತ್ಯಂತಾವಶ್ಯಕ.

**4. ಜನೈಕ್ಯ ಬುದ್ಧಿ:** ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಪ್ರತಿನಿಧಿಗಳು ಸಭೆಯಲ್ಲಿ ಕುಳಿತಾಗ ತಮ್ಮ ತಮ್ಮ ಜಾತಿಮತಗಳನ್ನು ಮರೆತು, ದೇಶವೆಲ್ಲವೂ ಒಂದೇ, ದೇಶೀಯರೆಲ್ಲರೂ ಒಂದೇ – ಎಂಬ ಭಾವನೆಯಿಂದ ತುಂಬಿರತಕ್ಕವರಾಗಬೇಕು. ನಮ್ಮಲ್ಲಿ ಜಾತಿ ಕಲಹ, ಮತ ಕಲಹಗಳು ಪ್ರಬಲಿಸಿ, ಪ್ರಜಾಸಮುದಾಯವನ್ನು ಭಿನ್ನ ಭಿನ್ನವಾಗಿ ಒಡೆದಿದೆ. ಎದುವರೆಗೂ ನಮ್ಮಲ್ಲಿ ಪ್ರಜಾಪ್ರಭುತ್ವವು ಜಯ ಪಡೆಯಲಾರದು. ನಮ್ಮ ಕುಲಭೇದ ಮತಭೇದಗಳು ಮನೆಗಳಲ್ಲಿಯೂ, ಮತಗಳಲ್ಲಿಯಾದರೋ, ಸಾರ್ವಜನಿಕ ಭಾವನೆಯೇ ಎಲ್ಲರಿಗೂ ಇರಬೇಕು.

**ಜಾತಿ ಮತಪಕ್ಷಪಾತಗಳ ನಿರಾಕರಣೆ**

ರಾಜ್ಯವೆಂಬುದು ದೇಹದಂತೆ. ದೇಹದ ಅಂಗಾಂಗಳ ಪೈಕಿ ತಲೆಗೂ, ಹೊಟ್ಟೆಗೂ ನೋವು ಬಂದರೆ, ಅದು ಕೈಕಾಲುಗಳನ್ನೂ ಬಾಯನ್ನೂ ಪೀಡಿಸದೆ ಹೋಗುವುದೇ? ಅಥವಾ ಕೈಕಾಲುಗಳಿಗೆ ಅಪಾಯವಾದರೆ, ಅದು ತಲೆ ಹೊಟ್ಟೆಗಳನ್ನೂ ಬಾಧೆಪಡಿಸುವುದಿಲ್ಲವೆ? ಅದೇ ರೀತಿ, ಊರಿನಲ್ಲಿ ಈ ದಿನ ಧನಿಕರ ಮನೆಗೆ ತುಂಟರು ನುಗ್ಗಿದರೆಂದು ಇತರರು ಸಂತೋಷಪಟ್ಟರೆ, ನಾಳೆ ಅದೇ ತುಂಟರೇ ಆ ಇತರರ ಮನೆಗೂ ನುಗ್ಗಲಾರರೆ? ಬಡವರ ಮನೆಯ ಬಳಿ ಕಶ್ಮಲ ತುಂಬಿ. ಅದರಿಂದ ರೋಗಬಂದಾಗ ಧನಿಕರು ನಿಶ್ಚಿಂತೆಯಿಂದ ಇದ್ದರೆ, ಆ ರೋಗದ ಸೋಂಕು ನಾಳೆ ಧನಿಕರ ಮನೆಯವರೆಗೂ ಹರಡದೆ ಹೋದೀತೆ? ಹೀಗೆ ನೋಡಿದರೆ, ದೇಶದ ಜೀವನವೆಲ್ಲವೂ ಒಂದೇ– ಅದರಲ್ಲಿ ಭೇದಗಳನ್ನು ಎಣಿಸುವುದು ಯಾರಿಗೂ, ಎಂದಿಗೂ ಕ್ಷೇಮವಲ್ಲ– ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದಕಾರಣ ನಮ್ಮ ವರಣಾಂಕವನ್ನು ಅಪೇಕ್ಷಿಸುವವರು ತಮ್ಮ ಜಾತಿ, ಅಥವಾ ತಮ್ಮ ಪಂಗಡ, ಅಥವಾ ತಮ್ಮ ಕೋಮು ಎಂಬ ಅಲ್ಪವಾದ ಅಭಿಮಾನಕ್ಕೆ ಒಳಗಾದವರೆ, ಅಥವಾ ದೇಶವೆಲ್ಲವೂ ತಮ್ಮದೇ ಎಂಬ ಉದಾರಭಾವನೆಯಿಂದ ತುಂಬಿದವರೆ– ಎಂಬುದನ್ನು ನಾವು ವಿಚಾರಮಾಡಿ, ಯಾರು ನಮ್ಮ ಒಳ ಜಗಳಗಳನ್ನು ಹೆಚ್ಚಿಸದೆ, ಸರ್ವಜನೈಕ್ಯ ದೃಷ್ಟಿಯಿಂದಲೇ ಕೆಲಸ ಮಾಡುವೆನೆಂದು ಭರವಸೆ

ಪುಟ 9 ಕ್ಕೆ ➢

ಕಾರ್ಯದರ್ಶಿ/ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-560002, ಇ ಮೇಲ್: kstbf63@gmail.com

ಸಂಖ್ಯೆ: ಶಿ.ಕ.ನಿ/ಆಡಳಿತ-1/2021-22 ದಿನಾಂಕ: 13-02-2023 16

## ಪರಿಷ್ಕೃತ ಸುತ್ತೋಲೆ

ವಿಷಯ:- ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವೈದ್ಯಕೀಯ ಧನಸಹಾಯವನ್ನು ಪರಿಷ್ಕರಿಸಿರುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ಪತ್ರ ದಿನಾಂಕ: 08-05-2018 ಮತ್ತು 07-10-2021.
2. ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ 04 ಮತ್ತು 05 ದಿನಾಂಕ: 08-11-2021.
3. ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ 04 ಮತ್ತು 06 ದಿನಾಂಕ: 14-12-2022.

** ** **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 04-12-2022ರಂದು ನಡೆದ ನಿಧಿಗಳ ಕಾರ್ಯಕಾರಿ ಸಮಿತಿ ಸಭೆಯ ನಡವಳಿ ಸಂಖ್ಯೆ 04ರಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ನೀಡುತ್ತಿರುವ ವೈದ್ಯಕೀಯ ಧನಸಹಾಯದ ಪರಿಷ್ಕರಣೆ ಕುರಿತು ಅಜೆಂಡಾ ಸಲ್ಲಿಸಲಾಗಿ ಈ ಕೆಳಕಂಡಂತೆ ವರ್ಗವಾರು ಪರಿಷ್ಕರಿಸಲು ತೀರ್ಮಾನಿಸಲಾಗಿರುತ್ತದೆ.

| ವರ್ಗೀಕರಣ | ಚಾಲ್ತಿಯಲ್ಲಿರುವ ದರ ರೂ.ಗಳಲ್ಲಿ | ಪರಿಷ್ಕರಿಸಬೇಕಾಗುವ ದರ ರೂ.ಗಳಲ್ಲಿ |
|---|---|---|
| ಎ | 10,000 | 20,000 |
| ಬಿ | 30,000 | 50,000 |
| ಸಿ | 50,000 | 75,000 |
| ಡಿ | 1,00,000 | 2,50,000 |

ಈ ಆದೇಶವು ದಿನಾಂಕ: 01-04-2023ರ ನಂತರ ಚಿಕಿತ್ಸೆ ಪಡೆಯುವ ಶಿಕ್ಷಕರು/ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ. ಉಳಿದಂತೆ ಉಲ್ಲೇಖ-1 ಮತ್ತು 2ರಲ್ಲಿ ಈಗಾಗಲೇ ಹೊರಡಿಸಿರುವ ಸೊತ್ತೋಲೆಯಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಹಾಗೂ ಕಾರ್ಯದರ್ಶಿ/ಖಜಾಂಚಿಗಳು,
ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ
ಬೆಂಗಳೂರು.
13/2

ಪ್ರತಿಯನ್ನು,

1. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ/ಕಲಬುರಗಿ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ಉಪನಿರ್ದೇಶಕರು/ಸಹನಿರ್ದೇಶಕರು, ಸಾ.ಶಿ.ಇಲಾಖೆ ಇವರಿಗೆ ಮಾಹಿತಿಗಾಗಿ.
6. ರಾಜ್ಯದ ಎಲ್ಲಾ ಸಹನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಮಾಹಿತಿಗಾಗಿ.
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇಲಾಖೆ ಇವರಿಗೆ ಮಾಹಿತಿಗಾಗಿ.
8. ರಾಜ್ಯದ ಎಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
9. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಕಛೇರಿ ಪ್ರತಿ.

➢ ಪುಟ 3 ರಿಂದ.....

ಸುಸಂಬದ್ಧವಾಗಿ ರಚಿತವಾದ ಸಮಾಜ. ಅಲ್ಲಿ ಅನೇಕ ಭಾಗಗಳಿವೆ. ಅವುಗಳಾಗುವುದೆಂದರೆ ಕಾರ್ಯಾಗಾರಗಳನ್ನು, ಒಕ್ಕಲು, ಜಮೀನು, ವಾಣಿಜ್ಯ ಹಾಗೂ ಔದ್ಯೋಗಿಕ ಸಂಕಿರಣಗಳು ಇರುತ್ತವೆ.

ಈ ಶಿಕ್ಷಣ ಕೇಂದ್ರವು ಹೆಸರಿಗೆ ಮಾತ್ರ ಅಂತಾರಾಷ್ಟ್ರೀಯವಾಗಿರದೆ ತನ್ನ ತತ್ವ ಹಾಗೂ ಕಾರ್ಯಾಚರಣೆಯಲ್ಲೂ ಅಂತಾರಾಷ್ಟ್ರೀಯ ಲಕ್ಷಣಗಳನ್ನು ಹೊಂದಿದೆ. ಅದು ವೈವಿಧ್ಯದಲ್ಲಿ ಏಕತೆಯನ್ನು ಸಾಧಿಸಿದೆ. ಇದು ಅರವಿಂದರ ಶಿಕ್ಷಣದ ಕಲ್ಪನೆಯಾಗಿದ್ದಿತು. ಇಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕವರ್ಗ ವಿಶ್ವದ ಅನೇಕ ರಾಷ್ಟ್ರಗಳಿಗೆ ಸೇರಿದವರು. ಇಲ್ಲಿ ಅನೇಕ ಭಾರತೀಯ ಹಾಗೂ ವಿಶ್ವದ ಭಾಷೆಗಳನ್ನು ಬೋಧಿಸಲಾಗುತ್ತಿದೆ. ವಿಶ್ವದ ವಿವಿಧ ಸಂಸ್ಕೃತಿಗಳು ಕೇವಲ ತಾತ್ವಿಕವಾಗಿ ಮಾತ್ರವಲ್ಲದೆ ಸಂಗೀತ, ನೃತ್ಯ, ವಾಸ್ತುಶಿಲ್ಪ, ಉಡುಪುಗಳ ವೈವಿಧ್ಯ ಹಾಗೂ ಆಟೋಟಗಳೆಲ್ಲವು ಅಳವಡಿಸಲ್ಪಟ್ಟಿವೆ. ಇವುಗಳಿಗೆ ಸಂಬಂಧಿಸಿದ ಪ್ರದರ್ಶನಗಳು, ಚಲನಚಿತ್ರಗಳು ಮುಂತಾದ ವಿಧಾನಗಳನ್ನು ಬಳಸಲಾಗುತ್ತಿದೆ.

ಈ ಶಿಕ್ಷಣದ ಗುರಿ ಮಕ್ಕಳು ತಮ್ಮ ದೇಶೀಯ ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ತಿಳಿದುಕೊಳ್ಳುವುದರೊಂದಿಗೆ ಇತರ ದೇಶಗಳ ಜನಜೀವನ ಶೈಲಿ ಹಾಗೂ ಸಂಪ್ರದಾಯಗಳನ್ನು ತಿಳಿದುಕೊಂಡು ಅವುಗಳನ್ನು ಗೌರವಿಸುವ ಮನೋಭಾವವನ್ನು ತಿಳಿಯಬೇಕು. ಇದರಿಂದಾಗಿ ವಿಶ್ವದ ವಿವಿಧ ಜನಾಂಗಗಳ ಮಧ್ಯೆ ಸಾಮರಸ್ಯ ಬೆಳೆಯಬೇಕು. ಇದು ಅರವಿಂದರ ಕಲ್ಪನೆ ಹಾಗೂ ಶಿಕ್ಷಣ ಪದ್ಧತಿ ಈ ದಿಶೆಯಲ್ಲಿ ಒಂದು ಪ್ರಯೋಗ.

ಇವೆಲ್ಲಾ ಕಾರ್ಯಗಳಿಗೂ ಶ್ರೀಮಾತೆ (The Mother) ಸ್ಫೂರ್ತಿಯಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಅರವಿಂದರ ಶಿಕ್ಷಣ ತತ್ವಗಳು ಕಾರ್ಯಗತಗೊಂಡವು. ಅವರ ಜೀವಿತ ಕಾಲದಲ್ಲಿ ಅವರು ಆಶ್ರಮದ ಸಕಲ ಕಾರ್ಯಗಳ ನಿರ್ದೇಶಕರು ಹಾಗೂ ಗುರುವಾಗಿದ್ದರು. ಅಲ್ಲಿನ ಮಕ್ಕಳು, ಗುರುವೃಂದ ಮತ್ತಿತರರು ಶ್ರೀಮಾತೆಯವರ ದಿವ್ಯ ಸಾನಿಧ್ಯವನ್ನು ಪ್ರೀತಿ, ಗೌರವ ಹಾಗೂ ಗಾಢ ನಂಬಿಕೆಯಿಂದ ಅವರ ಸಲಹೆಗಳಿಗಾಗಿ ಎದುರು ನೋಡುತ್ತಿದ್ದರು. ಅವರ ಕಾಲಾನಂತರ ಅವರಿಂದ ತರಬೇತಿ ಹೊಂದಿ ಹಾಗೂ ಸ್ಫೂರ್ತಿ ಪಡೆದ ಶಿಕ್ಷಣ ತಜ್ಞರ ಮಾರ್ಗದರ್ಶನದಲ್ಲಿ ಈ ಕೇಂದ್ರ ಮುಂದುವರಿಯುತ್ತಿದ್ದು ಆಗಲೇ ವಿಶ್ವಮಾನ್ಯವಾಗಿದೆ. ಇಲ್ಲಿ ಪರೀಕ್ಷೆಗಳಿಲ್ಲ, ಪದವೀಪತ್ರಗಳ ಗೋಜಿಲ್ಲ. ಆದರೂ ಅರವಿಂದ ಹಾಗೂ ಶ್ರೀಮಾತೆಯವರಿಂದ ಶಿಕ್ಷಣವನ್ನು ಪಡೆದ ಅನೇಕರು ಭಾರತದ ಕೆಲವು ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದು ನೂರಾರು ಸ್ನಾತಕೋತ್ತರ ವಿದ್ಯಾರ್ಥಿ– ವಿದ್ಯಾರ್ಥಿನಿಯರಿಗೆ (Ph.D. Students) ಮಾರ್ಗದರ್ಶಕರಾಗಿ ದುಡಿಯುತ್ತಿದ್ದಾರೆ.

ಇಂದು ದೇಶದ ಪ್ರಗತಿ ಕಾರ್ಯಗಳಲ್ಲಿ ದುಡಿಯಲು ಹಾಗೂ ಸ್ವಸ್ಥ ಸಮಾಜದ ನಿರ್ಮಾಣ ಕಾರ್ಯದಲ್ಲಿ ಸೇವೆ ಸಲ್ಲಿಸಲು ಪದವಿ ಪತ್ರಗಳ ಅವಶ್ಯಕತೆ ಇಲ್ಲವೆಂಬುದನ್ನು ಮಹರ್ಷಿ ಶ್ರೀ ಅರವಿಂದರು ಶೈಕ್ಷಣಿಕ ಪ್ರಪಂಚಕ್ಕೆ ಮನವರಿಕೆ ಮಾಡಿದ್ದಾರೆ. ಶಿಕ್ಷಣ ವ್ಯಕ್ತಿತ್ವದ ವಿಕಸನದ ಒಂದು ಸಾಧನ ಹಾಗೂ ಅದು ಸರಿಯಾಗಿ, ಯೋಜಿತವಾಗಿ ರೂಪಿಸಲ್ಪಟ್ಟಲ್ಲಿ ವ್ಯಕ್ತಿ ಸರ್ವೋನ್ನತ ಮಟ್ಟವನ್ನು ಮುಟ್ಟಬಹುದೆಂಬುದನ್ನು ಸಾಬೀತುಪಡಿಸಿದ್ದಾರೆ. ●

➢ ಪುಟ 7 ರಿಂದ.....

ಕೊಡುವರೋ ಅಂಥವರಿಗೇ ನಮ್ಮ ಸಮ್ಮತಿ ಸಹಾಯಗಳನ್ನು ಕೊಡಬೇಕು.

## ಮತದಾರನ ವಿವೇಕ

ಮತದಾರನು ತನ್ನ ಮತವನ್ನು ವಿನಿಯೋಗಿಸುವುದರಲ್ಲಿ ಮೂರು ಪ್ರಶ್ನೆಗಳನ್ನು ಕೇಳುವುದು ಸ್ವಾಭಾವಿಕ:

1. ಮತವನ್ನು ಬೇಡಲು ಮುಂದೆ ಬಂದಿರುವ ಉಮೇದುವಾರನು ಯಾವುದಾದರೊಂದು ರಾಜಕೀಯ ಪಕ್ಷಕ್ಕೆ ಸೇರಿದವನೆ, ಸ್ವಂತಂತ್ರನೇ?

2. ಅವನು ಪಕ್ಷವರ್ತಿಯಾದಲ್ಲಿ– ಅ) ಆ ಪಕ್ಷದ ಪ್ರತಿಜ್ಞಾ ಪತ್ರಿಕೆಯೂ ವಾಗ್ದಾನಗಳೂ ಎಂಥವು? ಆ) ಆ ಪಕ್ಷವು ಅದುವರೆಗೂ ತೋರಿಸಿರುವ ಕಾರ್ಯಸಾಮರ್ಥ್ಯಗಳೆಂಥವು? ಇ) ಅಭ್ಯರ್ಥಿಯು ಪಕ್ಷಸ್ಥನಾಗಲಿ, ಸ್ವತಂತ್ರನಾಗಲಿ, ಅವನ ಬುದ್ಧಿಯೋಗ್ಯತೆ ನೀತಿಯೋಗ್ಯತೆಗಳು ಎಷ್ಟರವು?

ಹೀಗೆ ಪಕ್ಷಯೋಗ್ಯತೆ ವ್ಯಕ್ತಿಯೋಗ್ಯತೆಗಳೆರಡನ್ನೂ ಮತದಾರನು ಲಕ್ಷ್ಯದಲ್ಲಿರಿಸಿಕೊಳ್ಳುತ್ತಾನೆ. ದೇಶಕ್ಕೆ ಆಗಬೇಕಾಗಿರುವ ಸೇವೆಯೆಂಥಾದ್ದು, ಸಾರ್ವಜನಿಕ ಕಾರ್ಯಗಳು ಏನೇನು ಅವಶ್ಯವಾಗಿವೆ, ಆಡಳಿತದಲ್ಲಿ ಯಾವ ಯಾವ ತಿದ್ದುಪಾಟುಗಳು ಬೇಕು ಎಂಬ ವಿಚಾರಗಳಲ್ಲಿ ತಾನು ಮನಸ್ಸಿನಲ್ಲಿರಿಸಿಕೊಂಡಿರುವ ಭಾವನೆಗಳಿಗೆ ಯಾವ ಪಕ್ಷವು ಸಮೀಪವಾಗಿದೆ, ಯಾವ ಅಭ್ಯರ್ಥಿ ಅನುಕೂಲನಾದಾನು, ಎಂಬುದನ್ನು ಮತದಾರನು ಆಲೋಚಿಸುತ್ತಾನೆ.

ಒಂದಾನೊಂದು ರಾಜಕೀಯ ಪಕ್ಷವು ಘೋಷಿಸುವ ತತ್ತ್ವಗಳೂ, ಧ್ಯೇಯಗಳೂ ಸರ್ವಶ್ರೇಷ್ಠಗಳಾಗಿರಬಹುದು. ಆದರೆ ಆ ಧ್ಯೇಯಗಳನ್ನು ನಡೆಸಿಕೊಡುವ ಕಾರ್ಯಶಕ್ತಿ ಅದಕ್ಕೆ ಇರುವುದೆಂಬ ಖಾತರಿ ವರಣಕರ್ತನಿಗೆ ಇಲ್ಲದೆಹೋಗಬಹುದು. ಇನ್ನೊಂದು ಪಕ್ಷದಲ್ಲಿ ಕಾರ್ಯಶಕ್ತಿಯುಂಟೆಂಬುದು ಅವನ ಕಣ್ಣಿಗೆ ಕಾಣುತ್ತಿರಬಹುದು; ಆದರೆ ಆ ಪಕ್ಷದ ದಾರಿಗಳು ಅವನ ಮನಸ್ಸಿಗೆ ಸರಿಯೆನ್ನಿಸದೆ ಇರಬಹುದು. ಮತ್ತೊಂದು ಪಕ್ಷದ ಪ್ರತಿಜ್ಞಾಪತ್ರವೂ ಅವನಿಗೆ ಆಕರ್ಷಕವಾಗಿರಬಹುದು; ಕಾರ್ಯಶಕ್ತಿಯೂ ಅದಕ್ಕೆ ತಕ್ಕಮಟ್ಟಿಗಿರುವಂತೆ ತೋರಬಹುದು; ಆದರೆ ಆ ಪಕ್ಷದ ಹೆಸರಿನಲ್ಲಿ ಮತವನ್ನು ಬೇಡುವ ಉಮೇದುವಾರನ ಯೋಗ್ಯತೆಯು ಕೀಳ್ಮಟ್ಟದ್ದಾಗಿರಬಹುದು. ಹೀಗಿದ್ದಲ್ಲಿಯೂ ಮತದಾನು ಒಲಿಯುವುದು ಕಷ್ಟವಾದೀತು. ಹೀಗೆ ಮೂರು ದೃಷ್ಟಿಗಳಿಂದಲೂ ಸಮರ್ಪಕ ತೋರಿದ ಕಡೆ ವರಣಕರ್ತನು ತನ್ನ ಇಷ್ಟಾಂಕವನ್ನು ಕೊಡುವುದು ಯುಕ್ತವಾಗುತ್ತದೆ.

ಆದರೆ ನಮ್ಮ ದೇಶದಲ್ಲಿ ಈ ಮೂರು ಸಂಗತಿಗಳ ಬಗೆಗೆ ಕೆಲವು ಅವಾಂತರ ಸಂಗತಿಗಳು ಸೇರಿಕೊಳ್ಳುತ್ತವೆ. ಜಾತ್ಯಭಿಮಾನ, ಗ್ರಾಮಾಭಿಮಾನ, ಕೂಟಾಭಿಮಾನ ಇಂಥವು ಆ ಅನುಚಿತ ಸಂಗತಿಗಳು, ವರಣಕಾರ್ಯ ಕೆಡುವುದು ಈ ಅಸಂಗತಗಳ ಪ್ರವೇಶದಿಂದ, ಉಮೇದುವಾರನು ಯಾವುದಾದರೂ ಒಂದು ಸುಸಂಘಟಿತವಾದ ರಾಜಕೀಯ ಪಕ್ಷದ ಸದಸ್ಯನೆ ಅಥವಾ ಬಿಡಿಯಾಗಿ ನಿಂತ ಸ್ವತಂತ್ರನೆ? ಎಂಬುದನ್ನು ಬಹು ಮುಖ್ಯವಾದ ಪ್ರಶ್ನೆ. ಶಾಸನಸಂಸ್ಥೆಯಲ್ಲಿ ಪಕ್ಷಸ್ಥನಾದ ಸದಸ್ಯನೂ ಸ್ವತಂತ್ರ ಸದಸ್ಯನೂ ಇಬ್ಬರೂ ಬೇಕಾದವರಾಗಿರುತ್ತಾರೆ. ಸ್ವತಂತ್ರನಿಂದ ಆಗಬಹುದಾದ ಉಪಕಾರಗಳು ಹೇರಳವಾಗಿರುತ್ತವೆ. ನಿಷ್ಪಕ್ಷಪಾತ ವಿಮರ್ಶೆಯೂ ನಿರ್ದಾಕ್ಷಿಣ್ಯ ವರ್ತನೆಯೂ ಸ್ವತಂತ್ರ ಸದಸ್ಯನೊಬ್ಬನಿಗೇ ಸಾಧ್ಯವಾದದ್ದು. ಅವುಗಳಿಂದ ಪ್ರಜೆಗೆ ಅಮೋಘವಾದ ಸತ್ಯನ್ಯಾಯ ಸೇವೆಯಾಗುತ್ತದೆ. ●

ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. – ಬಸವಣ್ಣ.

# ಏಕಾತ್ಮತಾ ಸ್ತೋತ್ರ

ಚಾರುಮತಿ
ಬೆಂಗಳೂರು

**ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚಿ ಅವಂತಿಕಾ।**
**ವೈಶಾಲೀ ದ್ವಾರಿಕಾ ಧ್ಯೇಯಾ ಪುರೀ ತಕ್ಷಶಿಲಾ ಗಯಾ।**

ಭಾರತವರ್ಷದ ಪ್ರತಿಯೊಂದು ಸ್ಥಳವೂ ಪವಿತ್ರವಾದುದು. ಪುಣ್ಯಕ್ಷೇತ್ರಗಳು, ಮಹಾಪುರುಷರು ಜನಿಸಿದ ಪವಿತ್ರ ತಾಣಗಳು ದೇಶದ ಉದ್ದಗಲಕ್ಕೂ ಇರುವುದನ್ನು ಕಾಣುತ್ತೇವೆ. ಇಂತಹ ಧರ್ಮಕ್ಷೇತ್ರಗಳು ಇಂದಿಗೂ ತಮ್ಮ ಹಿರಿಮೆಯನ್ನು ಉಳಿಸಿಕೊಂಡಿವೆ.

ಮಾಯಾ ಎಂಬುದು ಹರಿದ್ವಾರದ ಮತ್ತೊಂದು ಹೆಸರು.

ಹಿಂದೂಗಳು ಅತಿ ಪವಿತ್ರ ಎಂದು ಭಾವಿಸುವ ಏಳು ಕ್ಷೇತ್ರಗಳಲ್ಲಿ ಹರಿದ್ವಾರವೂ ಒಂದು. ಹಿಮಾಲಯದ ಗೋಮುಖದಲ್ಲಿ ಹುಟ್ಟಿ, ಪರ್ವತಗಳ ನಡುವೆ ಹರಿದುಬರುವ ಗಂಗಾನದಿಯು ಹರಿದ್ವಾರದಲ್ಲಿ ಪೂರ್ಣವಾದ ಬಯಲುಪ್ರದೇಶವನ್ನು ಸೇರುತ್ತದೆ. ಈ ಕಾರಣದಿಂದ ಹರಿದ್ವಾರಕ್ಕೆ ಗಂಗಾದ್ವಾರವೆಂದೂ ಕರೆಯುತ್ತಾರೆ. ಸಮುದ್ರಮಥನದ ವೇಳೆ ಉದ್ಭವಿಸಿದ ಅಮೃತವನ್ನು ಗರುಡನು ಒಯ್ಯುತ್ತಿದ್ದಾಗ ಕಲಶದಿಂದ ಅಮೃತದ ಹನಿಗಳು ಉದುರಿದ ನಾಲ್ಕು ಸ್ಥಾನಗಳಲ್ಲಿ ಹರಿದ್ವಾರವೂ ಒಂದು. ಆದ್ದರಿಂದ ಇಲ್ಲಿಯೂ ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ 'ಕುಂಭಮೇಳ' ಎಂಬ ಉತ್ಸವವು ನಡೆಯುತ್ತದೆ. ಹರಿದ್ವಾರದ ಹರ್ ಕಿ ಪೌಡಿ ಎಂಬ ಸ್ಥಾನದಲ್ಲಿ ಅಮೃತದ ಬಿಂದುವು ಬಿದ್ದು ಅದನ್ನು ಬ್ರಹ್ಮಕುಂಡವೆಂದು ಕರೆಯಲಾಗುತ್ತದೆ. ಅಲ್ಲಿ ಗಂಗಾಸ್ನಾನ ಮಾಡುವುದು ಸಕಲ ಪಾಪಗಳನ್ನು ಕಳೆಯುತ್ತದೆಂಬ ನಂಬಿಕೆಯಿದೆ.

ಅಯೋಧ್ಯೆ ಭಾರತದ ಪ್ರಾಚೀನ ನಗರಗಳಲ್ಲಿ ಒಂದು. ಸರಯೂ ನದಿಯ ತೀರದಲ್ಲಿರುವ ಅದು ಭಾರತೀಯರ ಆರು ಪವಿತ್ರ ಸ್ಥಳಗಳಲ್ಲಿ ಒಂದೆಂಬ ಮಹತ್ವವನ್ನು ಹೊಂದಿದೆ. ಆದಿಕಾವ್ಯವಾದ ರಾಮಾಯಣದಲ್ಲಿ ಬರುವ ಶ್ರೀಮನ್ನಾರಾಯಣನ ಅವತಾರವೆನ್ನುವ ಶ್ರೀರಾಮನು ಈ ಅಯೋಧ್ಯೆಯಲ್ಲಿಯೇ ಜನ್ಮ ತಾಳಿದ್ದರಿಂದ ಈ ಸ್ಥಳವನ್ನು ರಾಮಜನ್ಮಭೂಮಿಯೆಂದು ಆರಾಧಿಸಲಾಗುತ್ತದೆ.

ಬ್ರಿಜ್ ಭೂಮಿ ಎಂದೂ ಕರೆಯುವ ಮಥುರಾ ಪಟ್ಟಣವು ಶ್ರೀಹರಿಯ ಅವತಾರವಾದ ಶ್ರೀಕೃಷ್ಣನು ಜನಿಸಿದ ಸ್ಥಳವೆಂಬ ಪಾವಿತ್ರ್ಯವನ್ನು ಪಡೆದುಕೊಂಡಿದೆ. ಇಲ್ಲಿಗೆ ಸಮೀಪದಲ್ಲಿನ ಬೃಂದಾವನದಲ್ಲಿ ಶ್ರೀಕೃಷ್ಣನು ತನ್ನ ಬಾಲ್ಯದ ದಿನಗಳನ್ನು ಕಳೆದನೆಂದು ಗೋಪಿಕಾ ಸ್ತ್ರೀಯರ ಜೊತೆಯಲ್ಲಿ ರಾಸಲೀಲೆಯಾಡಿದ ಮಧುರ ಸಂಗತಿಗಳ ಕಥೆಗಳು ಜನಮಾನಸದಲ್ಲಿ ಇಂದಿಗೂ ಹರಿದಾಡುತ್ತ ಅವೆಲ್ಲಕ್ಕೆ ಸಂಬಂಧಿಸಿದ ಚಿತ್ರಕಲೆಗಳಲ್ಲಿ, ಭಜನೆಗಳಲ್ಲಿ ವ್ಯಕ್ತವಾಗುತ್ತ ಜನರಲ್ಲಿ ಒಂದು ಭಾವನಾತ್ಮಕ ಸಂಬಂಧದೊಂದಿಗೆ ಪವಿತ್ರ ಭಾವನೆಯನ್ನೂ ಮಥುರಾ ಪಟ್ಟಣವು ಬೆಳೆಸಿದೆ. ಇಲ್ಲಿ ಶ್ರೀಕೃಷ್ಣನ ಮತ್ತು ಅವನ ಗೆಳತಿಯಾದ ರಾಧೆಯ ಅನೇಕ ಮಂದಿರಗಳಿವೆ.

ಕಾಶಿ ಎಂಬ ಹೆಸರೇ ಹಿಂದೂಗಳಲ್ಲಿ ಪವಿತ್ರ ಭಾವವನ್ನು ಮೂಡಿಸುತ್ತದೆ. ಇದು ಹಲವು ವಿಶೇಷತೆಗಳನ್ನು ಹೊಂದಿರುವ ನಗರವಾಗಿದೆ. ಜೀವನದಲ್ಲಿ ಒಮ್ಮೆಯಾದರೂ ಕಾಶಿ ವಿಶ್ವೇಶ್ವರನ ದರ್ಶನ, ಅಲ್ಲಿ ಹರಿಯುವ ಪಾಪನಾಶಿನಿ ಗಂಗಾನದಿಯಲ್ಲಿ ಸ್ನಾನ ಇವೆರಡೂ ಪ್ರತಿಯೊಬ್ಬ ಹಿಂದೂ ವ್ಯಕ್ತಿಯ ಮಹದಾಸೆಯೆನಿಸಿಕೊಂಡಿದೆ. ಅದುವೇ ಮೋಕ್ಷಸಾಧನವೆಂಬ ನಂಬಿಕೆಯಿದೆ.

ಹಾಗಾಗಿಯೇ ಅನಾದಿ ಕಾಲದಿಂದಲೂ ಇದು ತೀರ್ಥಯಾತ್ರೆಯ ಪ್ರಮುಖ ಸ್ಥಳವೆನಿಸಿಕೊಂಡಿದೆ. ಇಲ್ಲಿರುವ ಶಿವಲಿಂಗವು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ. ಮೊಘಲರ ಆಳ್ವಿಕೆಯಲ್ಲಿ ಹಲವಾರು ಬಾರಿ ಅವರ ಆಕ್ರಮಣಕ್ಕೆ ಇದು ಒಳಗಾಗಿದೆ. ಈ ದೇವಾಲಯದ ಪಕ್ಕದಲ್ಲಿಯೇ ಗ್ಯಾನವಾಪಿ ಮಸೀದಿಯೂ ಇದೆ. ಕೊನೆಯ ಬಾರಿಗೆ ಈ ದೇವಾಲಯವನ್ನು ಪುನರ್ ನಿರ್ಮಿಸಿದವಳು ಇಂದೋರ್‌ನ ರಾಣಿ ಅಹಲ್ಯಾಬಾಯಿ ಹೋಳ್ಕರ್.

# ಪರಮವೀರಚಕ್ರ ವಿಜೇತ ಮೇಜರ್ ಸೋಮನಾಥ ಶರ್ಮಾ

1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು; ಜೊತೆಗೆ ದೇಶದ ವಿಭಜನೆಯೂ ಆಯಿತು. ಪರಿಸ್ಥಿತಿಯ ಲಾಭ ಪಡೆದುಕೊಂಡು ಪಾಕಿಸ್ತಾನೀ ಸೈನ್ಯದ ಬೆಂಬಲದೊಂದಿಗೆ ದಾಳಿಕೋರರು ಕಾಶ್ಮೀರಕ್ಕೆ ನುಗ್ಗಲಾರಂಭಿಸಿದರು. ಶ್ರೀನಗರ ಸಮೀಪದ ಬಡಗಾಂವ್ ವಿಮಾನ ನಿಲ್ದಾಣದ ರಕ್ಷಣೆಯ ಹೊಣೆ ಮೇಜರ್ ಸೋಮನಾಥ ಶರ್ಮಾರ ಪಾಲಿಕೆ ಬಂತು. ಶತ್ರುಗಳ ಕೈವಶವಾದರೆ, ಕಾಶ್ಮೀರ ಕೈಬಿಟ್ಟಂತೆಯೇ ಎನ್ನುವ ಸ್ಥಿತಿಯಿತ್ತು. ಶತ್ರುಗಳು ಸಾಕಷ್ಟು ಸಂಖ್ಯೆಯಲ್ಲಿ ಮೂರು ದಿಕ್ಕಿನಿಂದ ಮುತ್ತಿಗೆ ಹಾಕಿದರು. ಮೇಜರ್ ಸೋಮನಾಥ ಶರ್ಮಾರ ಬಳಿ ಇದ್ದವರು ಕೇವಲ ಎಂಭತ್ತು ಸೈನಿಕರು. ಮದ್ದುಗುಂಡುಗಳೂ ಸಾಕಷ್ಟಿರಲಿಲ್ಲ. ಆ ಸೈನಿಕರೂ ಕೂಡ ಒಂದೇ ಕಡೆ ಇರದೇ ಐದು ಮೈಲಿಗಳ ವ್ಯಾಪ್ತಿಯಲ್ಲಿ ಅಲ್ಲಲ್ಲೆ ಹಂಚಿಹೋಗಿದ್ದರು. ಮೇಜರ್ ಶರ್ಮಾರ ಒಂದು ಕೈ ಮುರಿದಿತ್ತು. ಈ ಸ್ಥಿತಿಯಲ್ಲೂ ಕೈಗೆ ಪ್ಲಾಸ್ಟರ್ ಕಟ್ಟಿಕೊಂಡು, ನಿರಂತರವಾಗಿ ಒಂದು ಠಾಣೆಯಿಂದ ಇನ್ನೊಂದು ಠಾಣೆಗೆ ಓಡಾಡುತ್ತಾ ಪ್ರತಿಯೊಬ್ಬ ಸೈನಿಕನಿಗೂ ಅಗತ್ಯ ನೆರವು ನೀಡುತ್ತಿದ್ದರು.

ಆರು ಘಂಟೆಗಳ ಕಾಲ ಸತತ ಸಂಘರ್ಷ ನಡೆಯಿತು. ಈ ಮಧ್ಯೆ ಒಮ್ಮೆ ಮದ್ದುಗುಂಡಿನ ಪೆಟ್ಟಿಗೆಯನ್ನು ಹೊತ್ತೊಯ್ಯುವಾಗ ಶತ್ರುವಿನ ಗುಂಡೊಂದು ತಾಗಿ ಪೆಟ್ಟಿಗೆಯು ಸ್ಫೋಟವಾಯಿತು. ಮೇಜರ್ ಸೋಮನಾಥ ಶರ್ಮಾ ಕೆಳಗುರುಳಿದರು. ಇಂತಹ ಗಂಭೀರ ಸ್ಥಿತಿಯಲ್ಲೂ ಅವರು ಸೈನಿಕರಿಗೆ ಆದೇಶ ನೀಡಿದರು.–"ನನ್ನ ಬಗ್ಗೆ ಚಿಂತೆ ಮಾಡಬೇಡಿ. ವಿಮಾನ ನಿಲ್ದಾಣದ ರಕ್ಷಣೆ ಮಾಡಿ. ಶತ್ರುಪಡೆಯವರು ಒಂದು ಹೆಜ್ಜೆಯೂ ಮುಂದಿಡದಂತೆ ತಡೆಯಿರಿ." ಹೀಗೆ ಹೇಳುತ್ತಲೇ ಅವರು ಕೊನೆಯುಸಿರೆಳೆದರು. ಅಷ್ಟರಲ್ಲಿ ಕೇಂದ್ರ ಠಾಣೆಯಿಂದ ಇನ್ನೂ ಹೆಚ್ಚಿನ ಸೈನ್ಯ ಮತ್ತು ಮದ್ದುಗುಂಡುಗಳು ಬಂದು ತಲುಪಿದವು. ಆ ವೇಳೆಗೆ ಶತ್ರುಗಳು ಹೆದರಿ ಓಡಲಾರಂಭಿಸಿದ್ದರು. ಶ್ರೀನಗರದ ವಿವಾನ ನಿಲ್ದಾಣ ಸುರಕ್ಷಿತವಾಗುಳಿಯಿತು. ಇದರಿಂದಾಗಿಯೇ ಕಾಶ್ಮೀರ ಭಾರತದಲ್ಲಿಯೇ ಉಳಿಯಿತು. ತಮ್ಮ ಕರ್ತವ್ಯನಿಷ್ಠೆಗಾಗಿ, ಅದ್ಭುತ ಸಾಹಸಕ್ಕಾಗಿ ಸೈನಿಕಜೀವನದ ಅತ್ಯುನ್ನತ ಗೌರವವಾದ ಪರಮವೀರ ಚಕ್ರ' ಮೇಜರ್ ಸೋಮನಾಥ ಶರ್ಮಾರಿಗೆ ಸಂದಿತು. ಇದು ಸ್ವತಂತ್ರ ಭಾರತದ ಪ್ರಥಮ 'ಪರಮವೀರ ಚಕ್ರ' ಪ್ರಶಸ್ತಿಯಾಗಿತ್ತು. ಮೇಜರ್ ಸೋಮನಾಥ ಶರ್ಮಾರ,ಅಸ ಶೌರ್ಯ ಪರಾಕ್ರಮಗಳು ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿವೆ.

**ಕೃಪೆ : ಕೈತುತ್ತು**

**ಅವಿದ್ಯಾಬಂಧದಿಂದ ಬಿಡುಗಡೆ ಮಾಡಲು ತನ್ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. – ಶಂಕರಾಚಾರ್ಯ.**

# ಯುಗಾದಿ ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ, ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ಶಿಕ್ಷಕರಿಗೆ ಗೌರವ ಸಮರ್ಪಣೆ ಮತ್ತು ABRSM ರಾಷ್ಟ್ರೀಯ ಅಧಿವೇಶನದಲ್ಲಿ ಭಾಗವಹಿಸಿದ ಕಾರ್ಯಕರ್ತರಿಗೆ ಅಭಿನಂದನಾ ಪತ್ರ ವಿತರಣೆ ಕಾರ್ಯಕ್ರಮ



ದಿನಾಂಕ 25–3–2023ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ ಸಹಯೋಗದಲ್ಲಿ ಶ್ರೀ ಶೋಭಕೃತ್ ನಾಮ ಸಂವತ್ಸರದ ಯುಗಾದಿ ಹೊಸವರ್ಷದ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮ, 2022–23ನೇ ಶೈಕ್ಷಣಿಕ ಸಾಲಿನ ಹತ್ತನೆಯ ತರಗತಿ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಹಮಿಕೊಳ್ಳಲಾಗಿದ್ದ ಫೋನ್‌ಇನ್ ಕಾರ್ಯಕ್ರಮದ ಸಂಪನ್ಮೂಲ ಶಿಕ್ಷಕರಿಗೆ ಗೌರವ ಸಮರ್ಪಣೆ ಮತ್ತು ABRSM ರಾಷ್ಟ್ರೀಯ ಅಧಿವೇಶನದಲ್ಲಿ ಉತ್ಸುಕರಾಗಿ ಭಾಗವಹಿಸಿ ಯಶಸ್ವಿಯಾಗಿ ನೆರವೇರಿಸಿದ ಕಾರ್ಯಕರ್ತರಿಗೆ ಅಭಿನಂದನಾ ಪತ್ರ ವಿತರಣೆ ಕಾರ್ಯಕ್ರಮವು ಶೇಷಾದ್ರಿಪುರಂನಲ್ಲಿರುವ ಯಾದವಸ್ಮೃತಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ಶ್ರೀ ನಾರಾಯಣ ಭಟ್ಟರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಹರಿದಾಸ್‌ರವರು ಗಣೇಶ ಸ್ತುತಿಯನ್ನು ನೆರವೇರಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೂಡಗಿರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಕಾರ್ಯಕ್ರಮದ ನಿರೂಪಣೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಟ್ಟರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ ಜೋಷಿರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಶಿಕ್ಷಕ ಸಂಘವು ಬೆಳೆದು ಬಂದ ರೀತಿ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಸಂಘದ ಮುಖಾಂತರ ನಡೆಸುವ ಎಲ್ಲಾ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯರು, ಮಾರ್ಗದರ್ಶಕರು, ಪೋಷಕರಾದ ಶ್ರೀಯುತ ಹೆಚ್‌ನಾಗಭೂಷಣ ರಾವ್‌ರವರು ಯುಗಾದಿ ಹೊಸ ವರ್ಷದ ದಿನದರ್ಶಿಕೆಯನ್ನು ಅನಾವರಣಗೊಳಿಸಿ ನಮ್ಮ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಾ ನಾವು ಯುಗಾದಿಯಲ್ಲಿ ಹೊಸ ವರ್ಷಾಚರಣೆ ಏಕೆ ಮಾಡುತ್ತಿದ್ದೇವೆ ಎಂಬುದನ್ನು ವೈಜ್ಞಾನಿಕ ಕಾರಣಗಳಿಮದ ವಿವರಿಸಿದರು. ನಮ್ಮ ಪ್ರಕೃತಿಯು ಸಹ ಯುಗಾದಿಯ ಜೊತೆ ಯಾವ ರೀತಿ ಸ್ಪಂದಿಸುತ್ತಿದೆ ಎಂದು ತಿಳಿಸುತ್ತಾ ಯುಗಾದಿ ಹೊಸವರ್ಷದ ದಿನದರ್ಶಿಕೆಯ ಮಹತ್ವವನ್ನು ವಿವರಿಸಿದರು.

ನಂತರ ವೇದಿಕೆಯ ಮೇಲಿರುವ ಗಣ್ಯರಾದ ಶ್ರೀಯುತ ಹೆಚ್ ನಾಗಭೂಷಣರಾವ್‌ರವರು ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ಪ್ರಮುಖರಾದ ಶ್ರೀಮತಿ ಸೀತಾಲಕ್ಷ್ಮಿಯವರು ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂಪನ್ಮೂಲ ಶಿಕ್ಷಕರಿಗೆ ಗೌರವ ಸಮರ್ಪಣೆ ನೆರವೇರಿಸಿದರು. ಶಿಕ್ಷಕರ ವಿವರಗಳನ್ನು ಬೆಂಗಳೂರು ಉತ್ತರ ವಲಯ–3ರ ಕಾರ್ಯದರ್ಶಿಯವರಾದ ಶ್ರೀ ಕಿರಣ್ ಕುಮಾರ್.ಎಸ್ ರವರು ನೀಡಿದರು. ಗೌರವ ಸಮರ್ಪಣೆಯನ್ನು ಮಾಡಿದ ಶ್ರೀಮತಿ ಸೀತಾಲಕ್ಷ್ಮಿಯವರು ಮಾತನಾಡಿ ಈ ಕಾರ್ಯಕ್ರಮವು ತುಂಬಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ ಮತ್ತು ಹೆಚ್ಚಿನ ಶಿಕ್ಷಕರು ಪಾಲ್ಗೊಂಡಿರುವುದು ತುಂಬಾ ಸಂತಸವಾಗಿದೆ ಎಂದು ತಿಳಿಸಿದರು. ಸಂಪನ್ಮೂಲ ಶಿಕ್ಷಕರಾದ ಶ್ರೀ ನಾರಾಯಣ ಭಟ್‌ರವರು ಮತ್ತು ಶ್ರೀಮತಿ ಮಂಜುರೂಪರವರು ತಮ್ಮ ಅನಿಸಿಕೆಯಲ್ಲಿ ತಾವು ಫೋನ್‌ಇನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಜೊತೆ ಯಾವ ರೀತಿ ಚರ್ಚೆಗಳನ್ನು ಮಾಡಿ ಅವರ ಸಂದೇಹಗಳಿಗೆ ಪರಿಹಾರಗಳನ್ನು ನೀಡಿದರು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ, ರಾಜ್ಯ ಸಹ ಕಾರ್ಯದರ್ಶಿಯವರಾದ ಶ್ರೀ ಗಂಗಾಧರಾಚಾರಿಯವರು ಶಿಕ್ಷಕ ಸಂಘದ ಮಹತ್ವವನ್ನು ವಿವರಿಸಿದರು. ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕನ ಹಿತಕ್ಕಾಗಿ ಸಮಾಜ ಯಾವ ರೀತಿ ಸ್ಪಂದಿಸುತ್ತಿದೆ ಎಂದು ತಿಳಿಸಿದರು. ನಂತರ ABRSM ರಾಷ್ಟ್ರೀಯ ಅಧಿವೇಶನದ ಯಶಸ್ಸಿಗೆ ಕಾರಣಕರ್ತರಾದ ಕಾರ್ಯಕರ್ತರಿಗೆ ವೇದಿಕೆಯ ಮೇಲಿನ ಗಣ್ಯರು ಅಭಿವಂದನಾ ಪತ್ರ ವಿತರಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಯ ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪರವರು ABRSM ರಾಷ್ಟ್ರೀಯ ಅಧಿವೇಶನ ಕಾರ್ಯಕ್ರಮದ ಮತ್ತು ಕಾರ್ಯಕರ್ತರ ವಿವರಗಳನ್ನು ತಿಳಿಸಿದರು. ಬೆಂಗಳೂರು ದಕ್ಷಿಣ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ವೆಂಕಟರಮಣ ದೇವರ ಭಟ್‌ರವರು ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿ ಶ್ರೀ ಹರಿದಾಸ್‌ರವರ ಶಾಂತಿಮಂತ್ರಿದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

– ವರದಿ ಶ್ರೀ ಎಂವಿ ಗಂಗಾಧರ, ಕಾರ್ಯದರ್ಶಿ, ಅಧ್ಯಕ್ಷರು, ಕ.ರಾ.ಮಾ.ಶಿ.ಸಂ., ಬೆಂಗಳೂರು ಉತ್ತರ ವಲಯ–3

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-04-2023 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ




ವಸಂತ ವೇದ ಶಿಬಿರದಲ್ಲಿ ಪಾಲ್ಗೊಂಡ ಬೆಂಗಳೂರು ನಗರ ಜಿಲ್ಲೆಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಮುಖ ಕಾರ್ಯಕರ್ತರು ಮತ್ತು ಶಿಬಿರದಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳು.




## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

**D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.**

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com